**ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1994.**

**ಪ್ರಕರಣಗಳ ಕ್ರಮ ಪಟ್ಟಿ**


ಉದ್ದೇಶ ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

**ಅಧ್ಯಾಯ I**

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆ.

**ಅಧ್ಯಾಯ II**

**ವಿಶ್ವವಿಧ್ಯಾಲಯ**

3. ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ನಿಗಮನ.
4. ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಕರ್ತವ್ಯಗಳು.
5. ಅಧಿಕಾರ ವ್ಯಾಪ್ತಿ ಮತ್ತು ವಿಶೇಷ ಅಧಿಕಾರಗಳಿಗೆ ಅವಕಾಶ.
6. ವಿಶ್ವವಿದ್ಯಾಲಯ ಎಲ್ಲರಿಗೂ ಮುಕ್ತ.
7. ಸರ್ಕಾರಿ ಕಾಲೇಜುಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವುದು.
8. ಪರಿವೀಕ್ಷಣೆ ಮತ್ತು ನಿಯಂತ್ರಣ.

**ಅಧ್ಯಾಯ III**

**ವಿಶ್ವವಿದ್ಯಾಲಯದ ಅಧಿಕಾರಿಗಳು**

9. ವಿಶ್ವವಿದ್ಯಾಲಯದ ಅಧಿಕಾರಿಗಳು.
10. ಕುಲಪತಿ.
11. ಪ್ರೊ-ಚಾನ್ಸಲರ್.
12. ಉಪ-ಕುಲಪತಿ.
13. ಉಪ-ಕುಲಪತಿಯ ಅಧಿಕಾರಗಳು ಮತ್ತು ಕರ್ತವ್ಯಗಳು.
14. ವ್ಯಾಸಂಗ ವಿಭಾಗಗಳ ಡೀನರು.
15. ರಿಜಿಸ್ಟ್ರಾರ್.
16. ರಿಜಿಸ್ಟ್ರಾರ್ (ಮೌಲ್ಯಮಾಪನ).
17. ಹಣಕಾಸು ಅಧಿಕಾರಿ.
18. ಇತರ ಅಧಿಕಾರಿಗಳು.
19. ವಿಶ್ವವಿದ್ಯಾಲಯದ ಅಧಿಕಾರಿಗಳು ಶಾಸನಗಳ ಮೂಲಕ ಒದಗಿಸಿದುದನ್ನು ಬಿಟ್ಟು ಯಾವುದೇ ಇತರ ಗೌರವಧನವನ್ನು ಪಡೆಯಬಾರದು.

## ಅಧ್ಯಾಯ IV
### ವಿಶ್ವವಿದ್ಯಾಲಯದ ಪ್ರಾಧಿಕಾರಗಳು

20. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.
21. ಸೆನೆಟು.
22. ಸೆನೆಟಿನ ಸಭೆಗಳು.
23. ಸೆನೆಟಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.
24. ಸಿಂಡಿಕೇಟ್.
25. ಸಿಂಡಿಕೇಟಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.
26. ವಿದ್ಯಾವಿಷಯಕ ಪರಿಷತ್ತು.
27. ಯೋಜನಾ ಮಂಡಲಿ.
28. ಹಣಕಾಸು ಸಮಿತಿ.
29. ಅಧ್ಯಯನ ಮಂಡಲಿ.
30. ವ್ಯಾಸಂಗ ವಿಭಾಗಗಳು.
31. ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರ ಪದಾವಧಿ.
32. ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಸದಸ್ಯರ ಚುನಾವಣೆ.

## ಅಧ್ಯಾಯ V
### ಶಾಸನಗಳು, ಅಧ್ಯಾದೇಶಗಳು ಮತ್ತು ನಿಯಮಗಳು

33. ಶಾಸನಗಳು.
34. ಶಾಸನಗಳನ್ನು ಮಾಡುವ ಬಗೆ.
35. ಅಧ್ಯಾದೇಶಗಳು.
36. ನಿಯಮಗಳು.

## ಅಧ್ಯಾಯ VI
### ಹಣಕಾಸು ಮತ್ತು ಲೆಕ್ಕಪತ್ರಗಳು

37. ಸಾಮಾನ್ಯ ನಿಧಿಗಳು.
38. ಇತರ ನಿಧಿಗಳು.
39. ಸಾಲ ಪಡೆದುಕೊಳ್ಳುವ ಅಧಿಕಾರ.
40. ನಿಧಿಗಳ ನಿರ್ವಹಣೆ.
41. ಲೆಕ್ಕ ಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.
42. ಹಣಕಾಸಿನ ಅಂದಾಜುಗಳು.
43. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.
44. ವಾರ್ಷಿಕ ವರದಿ.

**ಅಧ್ಯಾಯ VII**

**ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳ ಮಾನ್ಯತೆ**

45. ಕಾಲೇಜುಗಳ ಸಂಯೋಜನೆ.
46. ಕೆಲವು ಸಂಸ್ಥೆಗಳಿಗೆ ಮಾನ್ಯತೆ.
47. ಕಾಲೇಜುಗಳ ಪರಿವೀಕ್ಷಣೆ ಮತ್ತು ವರದಿಗಳು.
48. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.

**ಅಧ್ಯಾಯ VIII**

**ವಿಶ್ವವಿದ್ಯಾಲಯದ ಅಧ್ಯಾಪಕರ ಮತ್ತು ಇತರ ನೌಕರರ ನೇಮಕಾತಿ**

49. ಅಧ್ಯಾಪಕರು ಮೊದಲಾದವರ ನೇಮಕಾತಿ.
50. ಬಡ್ತಿ ಯೋಜನೆಗಳಿಗನುಸಾರವಾಗಿ ನೇಮಕಾತಿ.
51. ಇತರ ಬೋಧಕೇತರ ಮತ್ತು ಲಿಪಿಕ ಸಿಬ್ಬಂದಿಯ ನೇಮಕಾತಿ.
52. ಅನುಸೂಚಿತ ಜಾತಿ ಮೊದಲಾದವರಿಗೆ ಬಡ್ತಿಗಾಗಿ ಖಾಲಿ ಸ್ಥಾನಗಳ ಮೀಸಲಾತಿ.
53. ಸೇವಾ ಷರತ್ತುಗಳು.
54. ನಿವೃತ್ತಿವೇತನ, ಉಪದಾನ ಇತ್ಯಾದಿ.

**ಅಧ್ಯಾಯ IX**

**ಸಾಮಾನ್ಯ**

55. ಪದವನ್ನು ತೆರವು ಮಾಡುವುದು.
56. ಆಕಸ್ಮಿಕ ರಿಕ್ತತೆಗಳನ್ನು ಭರ್ತಿ ಮಾಡುವುದು.
57. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.
58. ರಿಕ್ತಸ್ಥಾನಗಳಿಂದಾಗಿ ವಿಶ್ವವಿದ್ಯಾಲಯ ಪ್ರಾಧಿಕಾರಗಳ ವ್ಯವಹರಣೆಗಳು ಅಸಿಂಧುವಾಗಿರತಕ್ಕದ್ದಲ್ಲ.
59. ವಿಶ್ವವಿದ್ಯಾಲಯದ ಮತ್ತು ನಿಕಾಯಗಳ ರಚನೆಯಲ್ಲಿ ವಿವಾದಗಳು.
60. ಪ್ರಥಮ ಉಪ-ಕುಲಪತಿಯ ತಾತ್ಕಾಲಿಕ ಅಧಿಕಾರಗಳು.
61. ಉಪ-ಕುಲಪತಿ ಮತ್ತು ಇತರ ಅಧಿಕಾರಿಗಳು ಮುಂತಾದವರು, ಲೋಕ ನೌಕರರಾಗಿರತಕ್ಕದ್ದು.
62. ಶಾಸನಗಳು, ಅಧ್ಯಾದೇಶಗಳು, ಇತ್ಯಾದಿಗಳ ಮುಂದುವರಿಕೆ.
63. ಕೆಲವು ಪರೀಕ್ಷೆಯ ಬಗ್ಗೆ ಉಳಿಸುವಿಕೆ.
64. ಅಧಿನಿಯಮವು ಇತರ ಅಧಿನಿಯಮಿತಿಗಳ ಮೇಲೆ ಪ್ರಭಾವವುಳ್ಳದ್ದಾಗಿದೆ.
65. ತೊಂದರೆಗಳ ನಿವಾರಣೆ.

ಅಧಿಸೂಚನೆ-I


– – –

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

### I

**1994ರ ಅಧಿನಿಯಮ ಸಂಖ್ಯೆ 44.-** ರಾಜ್ಯದಲ್ಲಿ ಆಧುನಿಕ ವೈದ್ಯ ಪದ್ಧತಿ ಮತ್ತು ಭಾರತೀಯ ವೈದ್ಯ ಪದ್ಧತಿಯಲ್ಲಿ ಸೂಕ್ತ ಹಾಗೂ ಕ್ರಮಬದ್ಧವಾದ ಶಿಕ್ಷಣ, ಬೋಧನೆ, ತರಬೇತಿ ಮತ್ತು ಸಂಶೋಧನೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಹಾಗೂ ನಿಗಮನಗೊಳಿಸುವುದು ಅವಶ್ಯವೆಂದು ಭಾವಿಸಲಾಗಿದೆ.

ಆದುದರಿಂದ ಈ ವಿಧೇಯಕ.

(1994ರ ವಿಧಾನಸಭಾ ವಿಧೇಯಕ ಸಂಖ್ಯೆ 21ರಲ್ಲಿದ್ದಂತೆ)

### II

**1998ರ ತಿದ್ದುಪಡಿ ಅಧಿನಿಯಮ ಸಂಖ್ಯೆ 11.-** ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಸ್ಥಾನವನ್ನು ಮೈಸೂರಿನಿಂದ ಬೆಂಗಳೂರಿಗೆ ಬದಲಾಯಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ವಿಧೇಯಕ.-

(1997ರ ವಿಧಾನಸಭಾ ವಿಧೇಯಕ ಸಂಖ್ಯೆ 6ರಲ್ಲಿದ್ದಂತೆ)

### III

**2007ರ ತಿದ್ದುಪಡಿ ಅಧಿನಿಯಮ ಸಂಖ್ಯೆ 20.-**_ರಾಮನಗರವು ಬೆಂಗಳೂರು ನಗರದಿಂದ ಸುಮಾರು 50 ಕಿ.ಮೀ. ದೂರದಲ್ಲಿ ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯಲ್ಲಿದೆ. ಬೆಂಗಳೂರು ನಗರದ ಮೇಲಿರುವ ಒತ್ತಡವನ್ನು ಬಹಳಷ್ಟು ಕಡಿಮೆ ಮಾಡುವುದಕ್ಕಾಗಿ ಮತ್ತು ಬೆಂಗಳೂರು ನಗರಕ್ಕೆ ಪರ್ಯಾಯ ನಗರವಾಗಿ ರಾಮನಗರವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ರಾಜ್ಯ ಸರ್ಕಾರವು ರಾಮನಗರವನ್ನು ಜಿಲ್ಲೆಯಾಗಿ ಪರಿವರ್ತಿಸಲು ಆಲೋಚಿಸುತ್ತಿದೆ. ಈ ದಿಶೆಯಲ್ಲಿ ಕಂದಾಯ, ಪೋಲೀಸು ಮತ್ತು ಜಿಲ್ಲಾ ಪಂಚಾಯತ್‌ಗಳ ಜಿಲ್ಲಾ ಮಟ್ಟದ ಕಚೇರಿಗಳನ್ನು ನಿರ್ಮಿಸುವ ಕೆಲಸ ಪ್ರಾರಂಭವಾಗಿದೆ. ವೈದ್ಯಕೀಯ, ದಂತ ವೈದ್ಯಕೀಯ, ಫಾರ್ಮಸಿ, ನರ್ಸಿಂಗ್ ಕಾಲೇಜುಗಳು ಮತ್ತು 250 ಹಾಸಿಗೆಗಳಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು 750 ಹಾಸಿಗೆಗಳುಳ್ಳ ಹೈಟೆಕ್ ಆಸ್ಪತ್ರೆ ಹಾಗೂ ಇಂಥಹವೇ ಇತರ ಕಟ್ಟಡಗಳನ್ನುಳ್ಳ ಆರೋಗ್ಯ ಸಂಕೀರ್ಣ ಸಹಿತವಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಕ್ಯಾಂಪಸನ್ನು ನಿರ್ಮಾಣ ಮಾಡಲು ಸಹ ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2007ರ ವಿಧಾನಸಭಾ ವಿಧೇಯಕ ಸಂಖ್ಯೆ 35ರಲ್ಲಿದ್ದಂತೆ)
(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ ನಮೂದನೆ 25ರ ಅಡಿಯಲ್ಲಿ ಇರುವಂತೆ)

### IV

**2014ರ ಅಧಿನಿಯಮ ಸಂಖ್ಯೆ 01.–** ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1994ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,–

(i) ವಿಶ್ವವಿದ್ಯಾಲಯದ ಸೆನೆಟ್‌ನಲ್ಲಿ ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಯವರನ್ನು ಸೇರಿಸುವುದು;

(ii) ವಿಶ್ವವಿದ್ಯಾಲಯದ ಸಿಂಡಿಕೇಟ್‌ನಲ್ಲಿ ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಯವರನ್ನು ಸೇರಿಸುವುದು;

(iii) ಸರ್ಕಾರವು ಆರೋಗ್ಯ ವಿಜ್ಞಾನಗಳ ಕ್ಷೇತ್ರದಲ್ಲಿ ಪರಿಣಿತರಾದ ಆರು ಸದಸ್ಯರನ್ನು ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡುವುದು;

(iv) ನಿಧಿಗಳ ನಿರ್ವಹಣೆಯ ಬಗ್ಗೆ ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಕ್ಕೆ ನಿರ್ದೇಶನಗಳನ್ನು ನೀಡುವುದು;

(v) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ ಹಾಗೂ ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ವಿಧಾನವನ್ನು ನಿರ್ದಿಷ್ಟಪಡಿಸುವುದು;

(vi) ವಿಶ್ವವಿದ್ಯಾಲಯದ ಉಪಕುಲಪತಿಯವರ ನೇಮಕಾತಿಗಾಗಿ ಶೋಧನಾ ಸಮಿತಿಯನ್ನು ಪುನರ್ ರಚಿಸುವುದು;

(vii) ಉಪಕುಲಪತಿಯ ಪದಾವಧಿಯನ್ನು ಗೊತ್ತುಪಡಿಸುವುದು;

(viii) ವಿಶ್ವವಿದ್ಯಾಲಯದ ರಿಜಿಸ್ಟ್ರಾರ್, ರಿಜಿಸ್ಟ್ರಾರ್ (ಮೌಲ್ಯಮಾಪನ), ಹಣಕಾಸು ಅಧಿಕಾರಿ ಮತ್ತು ಇತರ ಅಧಿಕಾರಿಗಳ ನೇಮಕಾತಿಯ ವಿಧಾನವನ್ನು ಗೊತ್ತುಪಡಿಸುವುದು; ಮತ್ತು

(ix) ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ಕ್ಕೆ ಅನುಸಾರವಾಗಿ ಕೆಲವು ವಿವೇಚನಾಯುಕ್ತ ಮತ್ತು ಪ್ರಾಸಂಗಿಕವಾದ ತಿದ್ದುಪಡಿಗಳನ್ನು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ15:, ಕಡತ ಸಂಖ್ಯೆ:ಸಂವ್ಯಶಾಇ 49 ಶಾಸನ 2013)

(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 25ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

* * *

**1994ರ ಕರ್ನಾಟಕ ಅಧಿನಿಯಮ ಸಂಖ್ಯೆ 44**

1994ರ ಆಕ್ಟೋಬರೆ ಇಪ್ಪತ್ತೈದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1994.**

1994ರ ಆಕ್ಟೋಬರ್ ಇಪ್ಪತ್ತೊಂದನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆಯನ್ನು ಪಡೆಯಲಾಗಿದೆ).

(1998ರ ಸಂಖ್ಯೆ 11, 2007ರ ಸಂಖ್ಯೆ 20, ಮತ್ತು 2014ರ 01 ಅಧಿನಿಯಮದಿಂದ ತಿದ್ದುಪಡಿಯಾದಂತೆ)

**ಕರ್ನಾಟಕ ರಾಜ್ಯದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಎಂದು ಕರೆಯಲಾಗುವ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಲು ಮತ್ತು ನಿಗಮಿತಗೊಳಿಸಲು ಒಂದು ಅಧಿನಿಯಮ.**

ಕರ್ನಾಟಕ ರಾಜ್ಯದಲ್ಲಿ, ಆಧುನಿಕ ವೈದ್ಯ ಪದ್ಧತಿ ಹಾಗೂ ಭಾರತೀಯ ವೈದ್ಯ ಪದ್ಧತಿಗಳಲ್ಲಿ ಸೂಕ್ತ ಮತ್ತು ವ್ಯವಸ್ಥಿತವಾದ ಶಿಕ್ಷಣ, ಬೋಧನೆ, ತರಬೇತಿ ಮತ್ತು ಸಂಶೋಧನೆಯನ್ನು ಖಚಿತಪಡಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವುದು ಮತ್ತು ನಿಗಮಿತಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**ಅಧ್ಯಾಯ I**

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1994 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(3) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ 1[ದಿನಾಂಕದಂದು]1 ಜಾರಿಗೆ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆ ಸಂಖ್ಯೆ: ಆಕುಕ 28 ಎಂಎನ್‌ಎಫ್ 92 ದಿ: 18.3.1996ರ ಮೂಲಕ ದಿ: 1.6.1996ರಿಂದ ಜಾರಿಗೆ ಬಂದಿದೆ

**2. ಪರಿಭಾಷೆ.-** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,-

(ಎ) "ಸಂಯೋಜಿತ ಕಾಲೇಜು" ಎಂದರೆ ನಿಯಮಿಸಲಾದ ಶಾಸನಗಳ ಅನುಸಾರ ವಿಶ್ವವಿದ್ಯಾಲಯ ಪ್ರದೇಶದೊಳಗೆ ಇರುವ ಮತ್ತು ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಒಂದು ಕಾಲೇಜು ಅಥವಾ ಸಂಸ್ಥೆ ಮತ್ತು ಇದು ಈ ಅಧಿನಿಯಮದ ಅಡಿಯಲ್ಲಿ ವಿಶ್ವವಿದ್ಯಾಲಯಕ್ಕೆ ಸಂಯೋಜಿಸಬೇಕೆಂದು ಭಾವಿಸಲಾದ ಎಲ್ಲ ಕಾಲೇಜುಗಳು ಮತ್ತು ಸಂಸ್ಥೆಗಳನ್ನು ಒಳಗೊಳ್ಳುತ್ತದೆ;

(ಬಿ) "ಅಂಗೀಕೃತ ಸಂಸ್ಥೆ" ಎಂದರೆ ವಿಶ್ವವಿದ್ಯಾಲಯದಿಂದ ಒಂದು ಸಂಸ್ಥೆಯೆಂಬುದಾಗಿ ಮಾನ್ಯತೆ ಪಡೆದ ಒಂದು ಆಸ್ಪತ್ರೆ, ಆರೋಗ್ಯ ಕೇಂದ್ರ, ಸಂಯೋಜಿತ ಕಾಲೇಜು ಅಥವಾ ವಿಶ್ವವಿದ್ಯಾಲಯದ ಯಾವುದೇ ಪದವಿ, ಡಿಪ್ಲೋಮಾ ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿ ನೀಡುವ ಮೊದಲು

ಯಾವನೇ ವ್ಯಕ್ತಿಯು ಒಂದು ವ್ಯಾಸಂಗ ಕ್ರಮಕ್ಕೆ ಅವಶ್ಯವಾದ ತರಬೇತಿ ಯಾವುದಾದರೂ ಇದ್ದರೆ ಆ ತರಬೇತಿಯನ್ನು ಪಡೆಯಬಹುದಾದಂಥ ಇತರ ಸಂಸ್ಥೆ;

(ಸಿ) "ಡೀನ್" ಎಂದರೆ ವ್ಯಾಸಂಗ ವಿಭಾಗದ ಡೀನ್;

(ಡಿ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(ಇ) "ಆರೋಗ್ಯ ವಿಜ್ಞಾನಗಳು" ಎಂದರೆ ನಿವಾರಕ, ಉತ್ತೇಜಕ, ಚಿಕಿತ್ಸಕ ಮತ್ತು ಪುನರುಜ್ಜೀವನ ಸೇವೆಗಳಿಗೆ ಸಂಬಂಧಪಟ್ಟ ಅದರ ಎಲ್ಲ ಶಾಖೆಗಳನ್ನೊಳಗೊಂಡ ಆಧುನಿಕ ವೈಜ್ಞಾನಿಕ ವೈದ್ಯ ಪದ್ಧತಿ ಮತ್ತು ಇದರಲ್ಲಿ ಶಸ್ತ್ರ ಚಿಕಿತ್ಸೆ, ಹೆರಿಗೆ ಶಾಸ್ತ್ರ ಮತ್ತು ಸ್ತ್ರೀರೋಗ ಶಾಸ್ತ್ರ, ಔಷಧ ವಿಜ್ಞಾನ, ದಂತ ವಿಜ್ಞಾನ, ಶುಶ್ರೂಷೆ ಮತ್ತು ಇತರ ಸಂಬಂಧಿತ ವಿಷಯಗಳು

ಸೇರುತ್ತವೆ ಮತ್ತು ಅದರ ಎಲ್ಲ ಶಾಖೆಗಳನ್ನೊಳಗೊಂಡ ಭಾರತೀಯ ವೈದ್ಯ ಪದ್ಧತಿಗಳೂ ಸೇರುತ್ತವೆ;

(ಎಫ್) "ವಿದ್ಯಾರ್ಥಿ ನಿಲಯ" ಎಂದರೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯ ನಿರ್ವಹಿಸುತ್ತಿರುವ ಅಥವಾ ಅದರಿಂದ ಮನ್ನಣೆ ಪಡೆದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಇರುವ ವಾಸಸ್ಥಳದ ಘಟಕ;

(ಜಿ) "ಭಾರತೀಯ ವೈದ್ಯಪದ್ಧತಿ" ಗಳಲ್ಲಿ ಆಯುರ್ವೇದ, ಯುನಾನಿ, ಹೋಮಿಯೋಪತಿ, ನ್ಯಾಚುರೋಪತಿ, ಯೋಗ ಮತ್ತು ನಿಯಮಿಸಬಹುದಾದಂಥ ಇತರ ಶಿಕ್ಷಣಗಳು ಸೇರುತ್ತವೆ;

(ಹೆಚ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೂಲಕ ಅಥವಾ ಶಾಸನಗಳು, ಆಧ್ಯಾದೇಶಗಳು, ಅಥವಾ ನಿಯಮಗಳ ಮೂಲಕ ವಿನಿಯಮಿಸಲಾದುದು;

(ಐ) "ಪ್ರಾಂಶುಪಾಲ" ಎಂದರೆ ಒಂದು ಕಾಲೇಜು ಅಥವಾ ಒಂದು ಸಂಸ್ಥೆಯ ಮುಖ್ಯಸ್ಥ;

(ಜೆ) "ನೋಂದಾಯಿತ ಪದವೀಧರ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಪದವೀಧರ;

(ಕೆ) "ಶಾಸನಗಳು", "ಅಧ್ಯಾದೇಶಗಳು" ಮತ್ತು "ನಿಯಮಗಳು", ಎಂದರೆ ಅನುಕ್ರಮವಾಗಿ ಶಾಸನಗಳು, ಅಧ್ಯಾದೇಶಗಳು ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳು;

(ಎಲ್) "ವಿಶ್ವವಿದ್ಯಾಲಯದ ವಿದ್ಯಾರ್ಥಿ" ಎಂದರೆ ವಿಶ್ವವಿದ್ಯಾಲಯದ ಪದವಿ, ಡಿಪ್ಲೊಮಾ ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಗಳಿಗಾಗಿ ವ್ಯಾಸಂಗ ಕ್ರಮದ ಅಧ್ಯಯನವನ್ನು ಮುಂದುವರಿಸಲು ವಿಶ್ವವಿದ್ಯಾಲಯದಲ್ಲಿ ಭರ್ತಿಯಾದ ಯಾವೊಬ್ಬ ವ್ಯಕ್ತಿ;

(ಎಂ) "ಶಿಕ್ಷಕರು" ಎಂಬುದರಲ್ಲಿ ಪ್ರಾಧ್ಯಾಪಕರು, ರೀಡರುಗಳು, ಸಹಾಯಕ ಪ್ರಾಧ್ಯಾಪಕರು, ಉಪನ್ಯಾಸಕರು ಮತ್ತು ಆರೋಗ್ಯ ವಿಜ್ಞಾನಗಳ ಕಾಲೇಜು ಅಥವಾ ಸಂಸ್ಥೆಯಲ್ಲಿ ಪೂರ್ಣಕಾಲಿಕ ಆಧಾರದ ಮೇಲೆ ಶಿಕ್ಷಣ ನೀಡುವಂಥ ಇತರ ವ್ಯಕ್ತಿಗಳು ಸೇರುತ್ತಾರೆ;

(ಎನ್) "ವಿಶ್ವವಿದ್ಯಾಲಯದ ಶಿಕ್ಷಕರು" ಎಂದರೆ ವಿಶ್ವವಿದ್ಯಾಲಯದಲ್ಲಿ ಅಥವಾ ವಿಶ್ವವಿದ್ಯಾಲಯವು ನಿರ್ವಹಿಸುವ ಯಾವುದೇ ಕಾಲೇಜಿನಲ್ಲಿ ಪೂರ್ಣಕಾಲಿಕ ಅಧಾರದ ಮೇಲೆ ಶಿಕ್ಷಣ ನೀಡುವ ಉದ್ದೇಶಕ್ಕಾಗಿ ನೇಮಕ ಮಾಡಲಾದ ವ್ಯಕ್ತಿಗಳು;

(ಒ) "ವಿಶ್ವವಿದ್ಯಾಲಯ" ಎಂದರೆ ಈ ಅಧಿನಿಯಮದ 3ನೇ ಪ್ರಕರಣದಡಿ ಸ್ಥಾಪಿತವಾದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ;

(ಪಿ) "ವಿಶ್ವವಿದ್ಯಾಲಯ ಪ್ರದೇಶ" ಎಂದರೆ ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶ;

(ಕ್ಯೂ) "ವಿಶ್ವವಿದ್ಯಾಲಯ ಕಾಲೇಜು" ಎಂದರೆ, ಕಾಲೇಜಿಗೆ ಹೊಂದಿಕೊಂಡ ಆಸ್ಪತ್ರೆಯೂ ಸೇರಿದಂತೆ ವಿಶ್ವವಿದ್ಯಾಲಯವು ಸ್ಥಾಪಿಸುವ ಅಥವಾ ನಿರ್ವಹಿಸುವ ಮತ್ತು ನಿಯಮಿಸಬಹುದಾದಂಥ ಆಧ್ಯಾದೇಶಗಳ ಅನುಸಾರ ವಿಶ್ವವಿದ್ಯಾಲಯ ಪರೀಕ್ಷೆಗಳಿಗೆ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಥಿಗಳಿಗೆ ಅಧ್ಯಯನ ವ್ಯಾಸಂಗ ಕ್ರಮಗಳನ್ನು ಕಲ್ಪಿಸುವ ಒಂದು ಕಾಲೇಜು.

## ಅಧ್ಯಾಯ II

## ವಿಶ್ವವಿದ್ಯಾಲಯ

**3. ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ನಿಗಮನ.-** (1) ಕರ್ನಾಟಕ ರಾಜ್ಯದಾದ್ಯಂತ ಅಧಿಕಾರ ವ್ಯಾಪ್ತಿಯುಳ್ಳ "ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ" ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದ್ದು.

(2) ವಿಶ್ವವಿದ್ಯಾಲಯವು (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಹೆಸರಿನ ಒಂದು ನಿಗಮ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಉತ್ತರಾಧಿಕಾರ ಹಾಗೂ ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು. ಅದು ಚರ ಹಾಗೂ ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಧಿಕಾರ ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ವಿಶ್ವವಿದ್ಯಾಲಯದಿಂದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿನ ವಾದಪತ್ರಗಳಿಗೆ ರಿಜಿಸ್ಟ್ರಾರರು ಸಹಿ ಮಾಡತಕ್ಕದ್ದು ಮತ್ತು ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ದಾವೆಗಳು ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳನ್ನು ರಿಜಿಸ್ಟ್ರಾರರು ಹೊರಡಿಸತಕ್ಕದ್ದು ಮತ್ತು ಅವರಿಗೆ ಜಾರಿಗೊಳಿಸತಕ್ಕದ್ದು.

(4) ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಸ್ಥಾನವು [1][ರಾಮನಗರದಲ್ಲಿರತಕ್ಕದ್ದು][1] ಮತ್ತು ರಾಜ್ಯದೊಳಗೆ ಆದು ಸೂಕ್ತವೆಂದು ಮತ್ತು ಉಚಿತವೆಂದು ಭಾವಿಸಬಹುದಾದಂತಹ ಇತರ ಸ್ಥಳಗಳಲ್ಲಿ ಸರ್ಕಾರದ ಪೂರ್ವಾನುಮತಿಯೊಂದಿಗೆ ಹೆಚ್ಚಿನ ಕೇಂದ್ರಗಳನ್ನು ಸ್ಥಾಪಿಸಬಹುದು.

1. 2007ರ ಅಧಿನಿಯಮ ಸಂಖ್ಯೆ 20ರ ಮೂಲಕ ದಿ: 10.8.2007 ರಿಂದ ಪ್ರತಿಯೋಜಿಸಲಾಗಿದೆ.

(5) ವಿಶ್ವವಿದ್ಯಾಲಯವು ಬೋಧಿಸುವ ಮತ್ತು ಸಂಯೋಜನೆ ಮಾಡಿಕೊಳ್ಳುವ ವಿಶ್ವವಿದ್ಯಾಲಯವಾಗಿರತಕ್ಕದ್ದು.

**4. ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಕರ್ತವ್ಯಗಳು.-** ಈ ಅಧಿನಿಯಮದ ಉಪಬಂಧಗಳು ಮತ್ತು ಶಾಸನಗಳು ಹಾಗೂ ಆಧ್ಯಾದೇಶಗಳು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯವು ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ತಾನು ಯುಕ್ತವೆಂದು ಭಾವಿಸುವಂಥ ವೈದ್ಯಕೀಯ ಶಾಖೆಗಳು ಮತ್ತು ಪೂರಕ ವಿಜ್ಞಾನಗಳಲ್ಲಿ ಶಿಕ್ಷಣ ಮತ್ತು ತರಬೇತಿ ನೀಡುವುದು ಮತ್ತು ಎಲ್ಲ ಸಮಯಗಳಲ್ಲೂ ಗರಿಷ್ಠ ಮಟ್ಟದ ವಿದ್ಯಾವಿಷಯಕ ಉತ್ಕೃಷ್ಟತೆಯನ್ನು ಕಾಪಾಡಲು ಶ್ರಮಿಸುವ ಮೂಲಕ ಆರೋಗ್ಯ ವಿಜ್ಞಾನಗಳಲ್ಲಿ ಸಂಶೋಧನೆ ಹಾಗೂ ಪ್ರೌಢ ವ್ಯಾಸಂಗ ಮತ್ತು ಜ್ಞಾನ ಪ್ರಸಾರಕ್ಕಾಗಿ ವ್ಯವಸ್ಥೆ ಮಾಡುವುದು;

(ii) ನಿಯಮಿಸಲಾದ ರೀತಿಯಲ್ಲಿ ವಿನಾಯಿತಿಗೊಳಿಸಿದ್ದ ಹೊರತು, ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಅಥವಾ ಸಂಯೋಜಿತ ಕಾಲೇಜುಗಳಲ್ಲಿ ವ್ಯಾಸಂಗ ಕ್ರಮವನ್ನು ಅನುಸರಿಸಿ ವಿಶ್ವವಿದ್ಯಾಲಯದಿಂದ ನಿಯಮಿಸಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅಥವಾ

ನಿಯಮಿಸಬಹುದಾದ ಅಂಥ ಷರತ್ತುಗಳ ಅಡಿಯಲ್ಲಿ ಸಂಶೋಧನೆ ನಡೆಸಿರುವ ವ್ಯಕ್ತಿಗಳಿಗೆ ಪದವಿಗಳನ್ನು, ಡಿಪ್ಲೋಮಾಗಳನ್ನು, ಪ್ರಮಾಣಪತ್ರಗಳನ್ನು ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಸ್ಥಾಪಿಸುವುದು ಮತ್ತು ಪ್ರದಾನ ಮಾಡುವುದು;

(iii) ಅಗತ್ಯವಾಗಬಹುದಾದಂತೆ ವೈದ್ಯಕೀಯ ಕ್ಷೇತ್ರದ ವಿಶೇಷ ವಿಷಯಗಳ ವಿಭಾಗಗಳನ್ನು ವೃದ್ಧಿ ಪಡಿಸುವುದು, ಮೇಲ್ದರ್ಜೆಗೇರಿಸುವುದು ಮತ್ತು ಪ್ರಾರಂಭಿಸುವುದು ಹಾಗೂ ಅದು ನಿರ್ಧರಿಸಬಹುದಾದಂತೆ ಅಂಥ ವ್ಯಾಸಂಗ ಕ್ರಮಗಳಿಗೆ ಬೋಧನೆಯನ್ನು ಒದಗಿಸುವುದು;

(iv) ನಿಯಮಿಸಬಹುದಾದ ಅಂಥ ಷರತ್ತುಗಳ ಅಡಿಯಲ್ಲಿ ಪರೀಕ್ಷೆಗಳನ್ನು ನಡೆಸುವುದು ಮತ್ತು ಗೌರವ ಪದವಿಗಳನ್ನು ಅಥವಾ ಇತರ ಪ್ರಶಸ್ತಿಗಳನ್ನು ಪ್ರಧಾನ ಮಾಡುವುದು;

(v) ಪ್ರಧಾನ ಮಾಡಬೇಕಾಗಿರುವ ಯಾವುದೇ ಪದವಿ, ಬಿರುದು, ಡಿಪ್ಲೊಮಾ ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ತಡೆಹಿಡಿಯಲು ಷರತ್ತುಗಳನ್ನು ನಿಯಮಿಸುವುದು;

(vi) ವಿಶ್ವವಿದ್ಯಾಲಯದ ಧ್ಯೇಯಗಳನ್ನು ಸಾಧಿಸಲು ಅವಶ್ಯವಾಗುವ ವಿಶ್ವವಿದ್ಯಾಲಯ ಕಾಲೇಜುಗಳು, ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳು, ಗ್ರಂಥಾಲಯಗಳು ಅಥವಾ ಇತರ ಸಂಸ್ಥೆಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಆಡಳಿತನಿರ್ವಹಣೆ ಮಾಡುವುದು;

(vii) ಕಾಲೇಜುಗಳು ಮತ್ತು ಸಂಸ್ಥೆಗಳನ್ನು ಸಂಯೋಜಿಸುವುದು ಅಥವಾ ಮಾನ್ಯತೆ ನೀಡುವುದು ಅಥವಾ ಅಂಥ ಸಂಯೋಜನೆ ಅಥವಾ ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದು;

(viii) ವಿಶ್ವವಿದ್ಯಾಲಯದಲ್ಲಿರುವ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ, ಸಹ-ಪ್ರಾಧ್ಯಾಪಕರ, ರೀಡರುಗಳ, ಸಹಾಯಕ ಪ್ರಾಧ್ಯಾಪಕರ, ಉಪನ್ಯಾಸಕರ ಮತ್ತು ಇತರ ಬೋಧಕರ ಹುದ್ದೆಗಳನ್ನು ಸ್ಥಾಪಿಸುವುದು, ಅಮಾನತುಗೊಳಿಸುವುದು ಅಥವಾ ರದ್ದುಗೊಳಿಸುವುದು ಹಾಗೂ ಅವುಗಳಿಗೆ ಸೂಕ್ತ ನೇಮಕಾತಿಗಳನ್ನು ಮಾಡುವುದು;

(ix) ಫೆಲೋಷಿಪ್‌ಗಳು, ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳು, ವೃತ್ತಿವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು ಮತ್ತು ಪ್ರದಾನ ಮಾಡುವುದು;

(x) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಆಡಳಿತ ನಿರ್ವಹಣೆ ಮಾಡುವುದು ಹಾಗೂ ವಿಶ್ವವಿದ್ಯಾಲಯವು ನಿರ್ವಹಿಸದ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡುವುದು ಮತ್ತು ಅವುಗಳಿಂದ ಅಂಥ ಮಾನ್ಯತೆಯನ್ನು ಅಮಾನತುಗೊಳಿಸುವುದು ಅಥವಾ ಹಿಂತೆಗೆದುಕೊಳ್ಳುವುದು;

(xi) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಆರೋಗ್ಯ, ಹಿತರಕ್ಷಣೆ ಮತ್ತು ಶಿಸ್ತನ್ನು ಸಾಧಿಸುವಂಥ ನಿಯಂತ್ರಣವನ್ನು ಹೊಂದಿರುವುದು ಮತ್ತು ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳ ಮೇಲೆ ಕೂಡ ಇದೇ ಉದ್ದೇಶಕ್ಕಾಗಿ ಸಂಯೋಜಿತ ಕಾಲೇಜುಗಳ ಮೂಲಕ ಅಂಥದೇ ನಿಯಂತ್ರಣವನ್ನು ಹೊಂದಿರುವುದು;

(xii) ಈ ಅಧಿನಿಯಮದ ಉದ್ದೇಶಕ್ಕಾಗಿ ಸರ್ಕಾರವು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿರುವ ಎಲ್ಲ ಸ್ಥಿರ ಸ್ವತ್ತುಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು;

(xiii) ವಿಶ್ವವಿದ್ಯಾಲಯದ ಉದ್ದೇಶಕ್ಕಾಗಿ ಅನುದಾನದ ಮೂಲಕ, ಮರಣಶಾಸನಿಕ ವ್ಯವಸ್ಥೆಯ ಮೂಲಕ ಅಥವಾ ಅನ್ಯಥಾ ವಿಶ್ವವಿದ್ಯಾಲಯದಲ್ಲಿ ನಿಹಿತವಾಗಬಹುದಾದ ಯಾವುವೇ ದತ್ತಿಗಳು, ದೇಣಿಗೆಗಳು ಅಥವಾ ನಿಧಿಗಳನ್ನು ಅಂಗೀಕರಿಸುವುದು, ಧಾರಣ ಮಾಡುವುದು ಮತ್ತು ನಿರ್ವಹಿಸುವುದು ಹಾಗೂ ವಿಶ್ವವಿದ್ಯಾಲಯವು ಯುಕ್ತವೆಂದು ಭಾವಿಸಬಹುದಾದ ಯಾವುದೇ ರೀತಿಯಲ್ಲಿ ಅಂಥ ದತ್ತಿಗಳನ್ನು, ದೇಣಿಗೆಗಳನ್ನು ಅಥವಾ ನಿಧಿಗಳನ್ನು ತೊಡಗಿಸುವುದು;

ಪರಂತು, ವಿದೇಶದ, ವಿದೇಶಿ ಪ್ರತಿಷ್ಠಾನದ ಅಥವಾ ಅಂಥ ದೇಶದ ಪ್ರತಿಷ್ಠಾನದ ಯಾವನೇ ವ್ಯಕ್ತಿಯಿಂದ ಯಾವುದೇ ದೇಣಿಗೆಯನ್ನು ಸರ್ಕಾರದ ಅನುಮೋದನೆಯ ಹೊರತು ಅಂಗೀಕರಿಸತಕ್ಕದ್ದಲ್ಲ.

(xiv) ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರ, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಇತರ ನಿಗಮಿತ ನಿಕಾಯಗಳಿಂದ ಸರ್ಕಾರವು ಅನುಮೋದಿಸಬಹುದಾದ ಅಂಥ ಉದ್ದೇಶಗಳಿಗಾಗಿ ಭದ್ರತೆಯೊಂದಿಗೆ ಅಥವಾ ಭದ್ರತೆ ಇಲ್ಲದೆಯೇ ಹಣವನ್ನು ಸಾಲವಾಗಿ ಪಡೆಯಬಹುದು;

(xv) ಶುಲ್ಕವನ್ನು ನಿಗದಿ ಪಡಿಸುವುದು ಮತ್ತು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಶುಲ್ಕವನ್ನು ವಸೂಲಿ ಮಾಡುವುದು ಮತ್ತು ಸಂಗ್ರಹಿಸುವುದು;

(xvi) ಆರೋಗ್ಯ ವಿಜ್ಞಾನಗಳಿಗೆ ಸಂಬಂಧಪಟ್ಟ ಶ್ರೇಷ್ಠ ಕೃತಿಗಳ ಮತ್ತು ಸಂಶೋಧನೆಗಳ ಪ್ರಕಟಣೆಯನ್ನು ಕೈಗೊಳ್ಳುವುದು;

(xvii) ವಿಶ್ವವಿದ್ಯಾಲಯದ ಸಂಘಗಳನ್ನು ಸಂಘಟಿಸುವುದು, ವಿನಿಯಮಿಸುವುದು ಮತ್ತು ನಿಯಂತ್ರಿಸುವುದು;

(xviii) ಉದ್ಯೋಗ ವಿಭಾಗವನ್ನು ನಿರ್ವಹಿಸುವುದು;

(xix) ಇತರ ವಿಶ್ವವಿದ್ಯಾಲಯಗಳು ಮತ್ತು ವಿದ್ಯಾವಿಷಯಕ ಸಂಸ್ಥೆಗಳೊಂದಿಗೆ ಸಹಕರಿಸುವುದು;

(xx) ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಶೋಧನಾ ವಿಭಾಗ, ವಸ್ತು ಸಂಗ್ರಹಾಲಯಗಳು ಮತ್ತು ಮುದ್ರಣ ಮತ್ತು ಪ್ರಕಟಣಾ ವಿಭಾಗವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(xxi) ಸಂಶೋಧನಾ ಹುದ್ದೆಗಳನ್ನು ಸ್ಥಾಪಿಸುವುದು ಮತ್ತು ಅಂಥ ಹುದ್ದೆಗಳಿಗೆ ಸೂಕ್ತ ವ್ಯಕ್ತಿಗಳನ್ನು ನೇಮಿಸುವುದು;

(xxii) ಸಾಧ್ಯವಾದಷ್ಟು ಮಟ್ಟಿಗೆ ವಿಶ್ವವಿದ್ಯಾಲಯದ ಸಿಬ್ಬಂದಿಗೆ ಸೂಕ್ತ ನಿವಾಸ ಗೃಹಗಳನ್ನು ಕಲ್ಪಿಸುವುದು;

(xxiii) ಅನುಮೋದಿತ ದತ್ತಿಗಳ ಆಧಾರದ ಮೇಲೆ ಅರ್ಹ ವಿದ್ಯಾರ್ಥಿಗಳಿಗೆ ಬಹುಮಾನಗಳು ಮತ್ತು ಪದಕಗಳನ್ನು ಪ್ರದಾನ ಮಾಡುವುದು;

(xxiv) ಸಾಮಾನ್ಯವಾಗಿ ವಿಶ್ವವಿದ್ಯಾಲಯದ ಹೆಚ್ಚಿನ ಉದ್ದೇಶಗಳಿಗೆ ಅವಶ್ಯಕ ಅಥವಾ ಅಪೇಕ್ಷಣೀಯವೆಂದು ಭಾವಿಸಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳುವುದು ಅಥವಾ ಅಂಥ ಇತರ ಉಪಬಂಧಗಳನ್ನು ಮಾಡುವುದು.

**5. ಅಧಿಕಾರ ವ್ಯಾಪ್ತಿ ಮತ್ತು ವಿಶೇಷ ಅಧಿಕಾರಗಳಿಗೆ ಅವಕಾಶ.-** (1) ಆರೋಗ್ಯ ವಿಜ್ಞಾನದಲ್ಲಿ ಶಿಕ್ಷಣ ನೀಡುತ್ತಿರುವ ಕರ್ನಾಟಕದಲ್ಲಿನ ಯಾವುದೇ ಕಾಲೇಜು, ವಿಶ್ವವಿದ್ಯಾಲಯದ ಸಮ್ಮತಿ ಮತ್ತು ಸರ್ಕಾರದ ಮಂಜೂರಾತಿಯ ಹೊರತು ಭಾರತ ಅಥವಾ ವಿದೇಶದಲ್ಲಿನ ಇತರ ಯಾವುದೇ ವಿಶ್ವವಿದ್ಯಾಲಯದ ಯಾವುದೇ ವಿಶೇಷ ಅಧಿಕಾರಗಳಿಗೆ ಯಾವುದೇ ರೀತಿಯಲ್ಲಿ ಸಂಬಂಧ ಹೊಂದಿರತಕ್ಕದ್ದಲ್ಲ ಅಥವಾ ಅವಕಾಶ ಕೋರತಕ್ಕದ್ದಲ್ಲ.

(2) ರಾಜ್ಯದಲ್ಲಿ ಸ್ಥಾಪನೆಯಾದ ಯಾವುದೇ ವೈದ್ಯಕೀಯ ಕಾಲೇಜು ಅಥವಾ ಆರೋಗ್ಯ ವಿಜ್ಞಾನದ ಸಂಸ್ಥೆಯು ಗೊತ್ತುಪಡಿಸಿದ ದಿನಾಂಕಕ್ಕೆ ಮೊದಲು ಇತರ ವಿಶ್ವವಿದ್ಯಾಲಯದಿಂದ ಪಡೆಯುತ್ತಿದ್ದ ಯಾವುವೇ ಅಂಥ ವಿಶೇಷ ಅಧಿಕಾರಗಳನ್ನು ಅಂಥ ದಿನಾಂಕದಿಂದ ಪರಿಣಾಮವಾಗುವಂತೆ ಹಿಂದಕ್ಕೆ ಪಡೆಯಲಾಗಿದೆ ಎಂದು ಭಾವಿಸತಕ್ಕದ್ದು.

(3) ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದಂದು ಮತ್ತು ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ಈ ಹಿಂದೆ ಮೈಸೂರು, ಬೆಂಗಳೂರು, ಕರ್ನಾಟಕ, ಮಂಗಳೂರು, ಗುಲ್ಬರ್ಗಾ ಮತ್ತು ಕುವೆಂಪು ವಿಶ್ವವಿದ್ಯಾಲಯದ ವಿಶೇಷ ಅಧಿಕಾರಗಳಿಗೆ ಅವಕಾಶ ಹೊಂದಿದ್ದ ಅಥವಾ ಸಂಯೋಜನೆಯಾಗಿದ್ದ ಆರೋಗ್ಯ ವಿಜ್ಞಾನದ ಎಲ್ಲ ಕಾಲೇಜುಗಳು ಮತ್ತು ಸ್ವಾಯತ್ತ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ವಿಶೇಷ ಅಧಿಕಾರಗಳ ಅವಕಾಶ ನೀಡಲಾಗಿದೆ ಎಂದು ಅಥವಾ ಅದಕ್ಕೆ ಸಂಯೋಜನೆಯಾಗಿದೆ ಎಂದು ಭಾವಿಸತಕ್ಕದ್ದು.

**6. ವಿಶ್ವವಿದ್ಯಾಲಯ ಎಲ್ಲರಿಗೂ ಮುಕ್ತ.-** (1) ಯಾವೊಬ್ಬ ವ್ಯಕ್ತಿಯನ್ನು, ಲಿಂಗ, ಜನಾಂಗ, ಪಂಥ, ವರ್ಗ, ಜನ್ಮಸ್ಥಳ, ಮತೀಯ ನಂಬಿಕೆ ಅಥವಾ ರಾಜಕೀಯ ಅಥವಾ ಇತರೆ ಅಭಿಪ್ರಾಯದ ಆಧಾರ ಮಾತ್ರದಿಂದಲೇ ವಿಶ್ವವಿದ್ಯಾಲಯದ ಯಾವುದೇ ಹುದ್ದೆಯಿಂದ ಅಥವಾ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಯಾವುದೇ ಸದಸ್ಯತ್ವದಿಂದ ಅಥವಾ ಯಾವುದೇ ಪದವಿ, ಡಿಪ್ಲೊಮಾ ಅಥವಾ ಇತರೆ ವಿದ್ಯಾವಿಷಯಕ ಪ್ರಶಸ್ತಿಗಳಿಂದ ಅಥವಾ ವ್ಯಾಸಂಗ ಕ್ರಮಗಳಿಂದ ಹೊರತುಪಡಿಸತಕ್ಕದ್ದಲ್ಲ:

ಪರಂತು, ವಿಶ್ವವಿದ್ಯಾಲಯವು, ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟು, ಮಹಿಳೆಯರಿಗಾಗಿಯೇ ವಿಶೇಷವಾಗಿರುವ ಯಾವುದೇ ಕಾಲೇಜನ್ನು ನಿರ್ವಹಿಸಬಹುದು, ಸಂಯೋಜಿಸಬಹುದು ಅಥವಾ ಅದಕ್ಕೆ ಮಾನ್ಯತೆ ನೀಡಬಹುದು ಅಥವಾ ಮಹಿಳೆಯರಿಗಾಗಿ ಅಥವಾ ಸಾಮಾಜಿಕವಾಗಿ ಅಥವಾ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಮತ್ತು ಸಮುದಾಯಗಳ ಸದಸ್ಯರಿಗಾಗಿ ವಿಶ್ವವಿದ್ಯಾಲಯವು ನಿರ್ವಹಿಸುವ ಯಾವುವೇ ಸಂಸ್ಥೆಗಳಿಗೆ ವಿದ್ಯಾರ್ಥಿಗಳೆಂಬುದಾಗಿ ಪ್ರವೇಶಾವಕಾಶ ಕಲ್ಪಿಸುವ ಉದ್ದೇಶಕ್ಕಾಗಿ ಸ್ಥಾನಗಳನ್ನು ಮೀಸಲಿರಿಸಬಹುದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯವು, ಸರ್ಕಾರದ ವಿಶೇಷ ಅಥವಾ ಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ ಈ ಮುಂದಿನ ವರ್ಗಗಳ ವ್ಯಕ್ತಿಗಳಿಗಾಗಿ, ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ನಿಯಂತ್ರಿಸುತ್ತಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಾಗಿ ಪ್ರವೇಶ ನೀಡುವ ಉದ್ದೇಶಕ್ಕಾಗಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು ; ಎಂದರೆ

(i) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು;

(ii) ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳೆಂಬುದಾಗಿ ಸರ್ಕಾರವು ಕಾಲಕಾಲಕ್ಕೆ ಘೋಷಿಸಿದ ವರ್ಗಗಳು.

**7. ಸರ್ಕಾರಿ ಕಾಲೇಜುಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವುದು.-** (1) ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ, ಅಧಿಸೂಚನೆ ನೀಡುವ ಮೂಲಕ, ಯಾವುದೇ ಸಮಯದಲ್ಲಿ, ಆರೋಗ್ಯ ವಿಜ್ಞಾನದ ಯಾವುದೇ ಸರ್ಕಾರಿ ಕಾಲೇಜನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಬಹುದು ಮತ್ತು ಅಂಥ ವರ್ಗಾಣೆಯ ದಿನಾಂಕದಿಂದ ಸದರಿ ಕಾಲೇಜು ವಿಶ್ವವಿದ್ಯಾಲಯದ ಕಾಲೇಜಾಗತಕ್ಕದ್ದು.

(2) (1) ನೇ ಪ್ರಕರಣದ ಅಡಿ ಯಾವುದೇ ಸರ್ಕಾರಿ ಕಾಲೇಜನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿದಾಗ, ಹಾಗೆ ವರ್ಗಾವಣೆಯಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಈ ಮುಂದಿನ ಪರಿಣಾಮಗಳು ಉಂಟಾಗುತಕ್ಕದ್ದು, ಎಂದರೆ:-

(i) ಸದರಿ ಕಾಲೇಜುಗಳಿಗೆ ಸಂಬಂಧಪಟ್ಟ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳೂ ಸೇರಿದಂತೆ ಎಲ್ಲ ಆಸ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು;

(ii) ಅಂಥ ವರ್ಗಾವಣೆಯ ದಿನಾಂಕದ ನಿಕಟಪೂರ್ವದಲ್ಲಿ ಸದರಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಅಥವಾ ಆ ಕಾಲೇಜಿಗೆ ಹೊಂದಿಕೊಂಡಿದ್ದ ಸದರಿ ಕಾಲೇಜಿನ ಬೋಧಕ ಸಿಬ್ಬಂದಿಯ ಎಲ್ಲಾ ಸದಸ್ಯರು ಅಥವಾ ಇತರ ಉದ್ಯೋಗಿಗಳು ಅಂಥ ವರ್ಗಾವಣೆಗೆ ಮೊದಲು ಅವರಿಗೆ ಅನ್ವಯವಾಗುತ್ತಿದ್ದ ಅದೇ ಸೇವಾ ಷರತ್ತುಗಳ ಮೇಲೆ ಅಂಥ ವ್ಯಕ್ತಿಯ ಸಮ್ಮತಿಯೊಂದಿಗೆ ಅಂಥ ಷರತ್ತುಗಳನ್ನು ಮಾರ್ಪಾಟು ಮಾಡುವವರೆಗೆ ವಿಶ್ವವಿದ್ಯಾಲಯದಲ್ಲಿನ ಸೂಕ್ತ ಕೇಡರ್ ಅಥವಾ ಪ್ರವರ್ಗಗಳ ಹುದ್ದೆಗಳಿಗೆ ವರ್ಗಾವಣೆಯಾಗತಕ್ಕದ್ದು:

ಪರಂತು, ಸದರಿ ಕಾಲೇಜಿನ ಅಂಥ ಬೋಧಕ ಸಿಬ್ಬಂದಿಯ ಸದಸ್ಯನನ್ನು ಅಥವಾ ಇತರ ಉದ್ಯೋಗಿಯನ್ನು ಆ ಬಗ್ಗೆ ಅವನ ಒಪ್ಪಿಗೆ ಪಡೆಯದ ಹೊರತು ವರ್ಗಾಯಿಸತಕ್ಕದ್ದಲ್ಲ;

ಮತ್ತು ಪರಂತು, ಅಂಥ ವರ್ಗಾವಣೆಗಾಗಿ ಅಂಥ ಯಾವೊಬ್ಬ ಶಿಕ್ಷಕ ಅಥವಾ ಇತರ ಉದ್ಯೋಗಿಯು ತನ್ನ ಒಪ್ಪಿಗೆಯನ್ನು ನೀಡದಿದ್ದರೆ ಅವನು ಯಾವುದೇ ಕರಾರಿನಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧದಲ್ಲಿ ಏನೇ ಒಳಗೊಂಡಿದ್ದರೂ ಸೇವೆಯಿಂದ ನಿವೃತ್ತನಾಗತಕ್ಕದ್ದು. ಅಂಥ ನಿವೃತ್ತಿಯ ಸಂಬಂಧದಲ್ಲಿ ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗತಕ್ಕದ್ದಲ್ಲ. ಆದರೆ, ನಿವೃತ್ತಿಯ ದಿನಾಂಕದವರೆಗೆ ಅವನು ಸಲ್ಲಿಸಿದ ಸೇವೆಯ ಅವಧಿಗಾಗಿ ನಿವೃತ್ತಿಯ ಎಲ್ಲಾ ಪ್ರಯೋಜನೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

**8. ಪರಿವೀಕ್ಷಣೆ ಮತ್ತು ನಿಯಂತ್ರಣ.-** (1) ಸರ್ಕಾರವು, ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳಿಂದ, ವಿಶ್ವವಿದ್ಯಾಲಯದ ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುವ, ಆಡಳಿತ ನಡೆಸುವ, ಮಾನ್ಯತೆ ನೀಡಿರುವ ಅಥವಾ ಅಂಗೀಕರಿಸಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆಯ, ಕಟ್ಟಡಗಳ, ಪ್ರಯೋಗಾಲಯಗಳ, ಗ್ರಂಥಾಲಯಗಳ, ವಸ್ತು ಸಂಗ್ರಹಾಲಯಗಳ, ಕಾರ್ಯಾಗಾರಗಳ ಮತ್ತು ಸಾಧನ ಸಾಮಗ್ರಿಗಳ ಬಗ್ಗೆ ಮತ್ತು ವಿಶ್ವವಿದ್ಯಾಲಯವು ನಡೆಸಿದ ಅಥವಾ ನಿರ್ವಹಿಸಿದ ಪರೀಕ್ಷೆಗಳ, ಬೋಧನೆಗಳ ಮತ್ತು ಇತರ ಕೆಲಸಗಳ ಮತ್ತು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಪರಿವೀಕ್ಷಣೆಯನ್ನು ಮಾಡಿಸುವ ಹಕ್ಕು ಹೊಂದಿರತಕ್ಕದ್ದು. ಅಂಥ ಪರಿವೀಕ್ಷಣೆ ಅಥವಾ ವಿಚಾರಣೆಯನ್ನು ಮಾಡಿಸುವ ತನ್ನ ಉದ್ದೇಶದ ಬಗ್ಗೆ ಪ್ರತಿಯೊಂದು ಸಂದರ್ಭದಲ್ಲೂ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಸೂಚನೆಯನ್ನು ನೀಡತಕ್ಕದ್ದು ಮತ್ತು

ವಿಶ್ವವಿದ್ಯಾಲಯವು ಅಲ್ಲಿ ಪ್ರತಿನಿಧಿಸುವುದಕ್ಕೆ ಮತ್ತು ಅಂಥ ಪರಿವೀಕ್ಷಣೆ ಅಥವಾ ವಿಚಾರಣೆಯಲ್ಲಿ ಹೇಳಿಕೆ ಕೊಡುವುದಕ್ಕೆ ಹಕ್ಕುಳ್ಳದ್ದಾಗಿರತಕ್ಕದ್ದು.

(2) ಸರ್ಕಾರವು, ಪರಿವೀಕ್ಷಣಾ ವರದಿಯ ಒಂದು ಪ್ರತಿಯನ್ನು ಸಿಂಡಿಕೇಟಿನ ಅಭಿಪ್ರಾಯಗಳನ್ನು ಪಡೆಯುವ ಸಲುವಾಗಿ ಉಪಕುಲಪತಿಯವರಿಗೆ ಸಲ್ಲಿಸತಕ್ಕದ್ದು ಮತ್ತು ಅಂಥ ಅಭಿಪ್ರಾಯಗಳನ್ನು ಸ್ವೀಕರಿಸಿದ ನಂತರ, ಸರ್ಕಾರವು ವಿಶ್ವವಿದ್ಯಾಲಯಕ್ಕೆ ತಾನು ಅವಶ್ಯಕವೆಂದು ಭಾವಿಸುವಂಥ ಸಲಹೆಗಳನ್ನು ನೀಡಬಹುದು ಮತ್ತು ವಿಶ್ವವಿದ್ಯಾಲಯವು ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕಾಗಿ ಕಾಲಮಿತಿಯನ್ನು ನಿಗದಿಪಡಿಸಬಹುದು.

(3) ಸಿಂಡಿಕೇಟು, ಸರ್ಕಾರವು ಹಾಗೆ ನಿಗದಿಪಡಿಸಿದ ಸಮಯದೊಳಗೆ ಸರ್ಕಾರದ ಸಲಹೆಯ ಮೇರೆಗೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಕ್ರಮದ ಬಗ್ಗೆ ಉಪಕುಲಪತಿಯ ಮೂಲಕ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.

(4) ನಿಗದಿಪಡಿಸಿದ ಸಮಯದೊಳಗೆ ಸರ್ಕಾರಕ್ಕೆ ಸಮಾಧಾನವಾಗುವಂತೆ ಸಿಂಡಿಕೇಟು ಕ್ರಮವನ್ನು ಕೈಗೊಳ್ಳದಿದ್ದಲ್ಲಿ, ಸರ್ಕಾರವು ಸಿಂಡಿಕೇಟು ಒದಗಿಸಿದ ಯಾವುದೇ ವಿವರಣೆಯನ್ನು ಅಥವಾ ಮಾಡಲಾದ ಮನವಿಯನ್ನು ಪರಿಗಣಿಸಿದ ನಂತರ, ತಾನು ಯುಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ವಿಶ್ವವಿದ್ಯಾಲಯವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

## ಅಧ್ಯಾಯ III

## ವಿಶ್ವವಿದ್ಯಾಲಯದ ಅಧಿಕಾರಿಗಳು

**9. ವಿಶ್ವವಿದ್ಯಾಲಯದ ಅಧಿಕಾರಿಗಳು.-** ಈ ಕೆಳಕಂಡವರು ವಿಶ್ವವಿದ್ಯಾಲಯದ ಅಧಿಕಾರಿಗಳಾಗಿರತಕ್ಕದ್ದು ಎಂದರೆ:-

(i) ಕುಲಪತಿ,

(ii) ಪ್ರೊ-ಚಾನ್ಸಲರ್,

(iii) ಉಪ-ಕುಲಪತಿ,

(iv) ವ್ಯಾಸಂಗ ವಿಭಾಗಗಳ ಡೀನರು,

(v) ರಿಜಿಸ್ಟ್ರಾರ್,

(vi) ಹಣಕಾಸು ಅಧಿಕಾರಿ,

(vii) ರಿಜಿಸ್ಟ್ರಾರ್ (ಮೌಲ್ಯಮಾಪನ),

(viii) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಘೋಷಿಸಬಹುದಾದ ಅಂಥ ಇತರ ಅಧಿಕಾರಿಗಳು.

**10. ಕುಲಪತಿ.-** (1) ಕರ್ನಾಟಕದ ರಾಜ್ಯಪಾಲರು ಅವರ ಹುದ್ದೆಯ ಬಲದಿಂದಾಗಿ ವಿಶ್ವವಿದ್ಯಾಲಯದ ಕುಲಪತಿಯಾಗಿರತಕ್ಕದ್ದು.

(2) ಕುಲಪತಿಯು ವಿಶ್ವವಿದ್ಯಾಲಯದ ಮುಖ್ಯಸ್ಥನಾಗಿರತಕ್ಕದ್ದು ಮತ್ತು ಹಾಜರಿದ್ದಾಗ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ವಿಶ್ವವಿದ್ಯಾಲಯವು ಕುಲಪತಿಯ ಅಂಗೀಕಾರ ಪಡೆಯದೆ ಯಾವನೇ ವ್ಯಕ್ತಿಗೆ ಯಾವುದೇ ಗೌರವ ಪದವಿಯನ್ನು ನೀಡತಕ್ಕದ್ದಲ್ಲ.

(4) ಕುಲಪತಿಯು ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ಅಥವಾ ಅದರ ಅಡಿಯಲ್ಲಿ ತನಗೆ ಪ್ರದತ್ತವಾಗಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**11. ಪ್ರೊ-ಚಾನ್ಸಲರ್.-** (1) ಕರ್ನಾಟಕದ ವೈದ್ಯಕೀಯ ಶಿಕ್ಷಣ ಖಾತೆಯ ಪ್ರಭಾರ ಹೊಂದಿರುವ ಸಚಿವರು ತಮ್ಮ ಹುದ್ದೆಯ ಬಲದಿಂದಾಗಿ ಪ್ರೊ-ಚಾನ್ಸಲರ್ ಆಗಿರತಕ್ಕದ್ದು.

(2) ಪ್ರೊ-ಚಾನ್ಸಲರು ಶಾಸನಗಳ ಅಡಿಯಲ್ಲಿ ತನಗೆ ಪ್ರದತ್ತವಾಗಬಹುದಾದ ಅಂಥ ಕುಲಪತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು.

**12. ಉಪ-ಕುಲಪತಿ.-** (1) ಉಪ-ಕುಲಪತಿಯು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ಉಪ-ಕುಲಪತಿಯನ್ನು ಕುಲಪತಿಯು ಆರೋಗ್ಯ ವಿಜ್ಞಾನ ಕ್ಷೇತ್ರದಲ್ಲಿ ತಜ್ಞರಾಗಿರುವ ವ್ಯಕ್ತಿಗಳ ಹೆಸರಿನ ಪಟ್ಟಿಯಿಂದ ಆರಿಸಿ ನೇಮಕ ಮಾಡತಕ್ಕದ್ದು. ಈ ಪಟ್ಟಿಯಲ್ಲಿ ಅಕಾರಾದಿ ಕ್ರಮದಲ್ಲಿ ಮೂರು ಜನರಿಗೆ ಕಡಿಮೆಯಿಲ್ಲದಂತೆ ಮತ್ತು ಐದು ಜನರಿಗೆ ಹೆಚ್ಚಾಗದಂತೆ ವ್ಯಕ್ತಿಗಳಿರತಕ್ಕದ್ದು. ಪಟ್ಟಿಯನ್ನು (3)ನೇ ಉಪ-ಪ್ರಕರಣದ ಅಡಿಯಲ್ಲಿ ರಚಿಸಲಾದ ಸಮಿತಿಯು ಶಿಫಾರಸ್ಸು ಮಾಡತಕ್ಕದ್ದು:

ಪರಂತು,-

(ಎ) ಮೊದಲನೇ ಉಪ-ಕುಲಪತಿಯನ್ನು ಸರ್ಕಾರದ ಶಿಫಾರಸಿಗೆ ಅನುಸಾರವಾಗಿ ಕುಲಪತಿಯು ನೇಮಕ ಮಾಡತಕ್ಕದ್ದು;

(ಬಿ) ಯಾವನೇ ವ್ಯಕ್ತಿಯು ಅರವತ್ತೈದು ವರ್ಷ ವಯಸ್ಸಿನವನಾಗಿದ್ದರೆ, ಅತನನ್ನು ಉಪ-ಕುಲಪತಿಯನ್ನಾಗಿ ನೇಮಕ ಮಾಡತಕ್ಕದ್ದಲ್ಲ ಮತ್ತು ಅವನು ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ;

(ಸಿ) ಸಮಿತಿಯು ಶಿಫಾರಸ್ಸು ಮಾಡಿದ ವ್ಯಕ್ತಿಗಳ ಪೈಕಿ ಯಾವೊಬ್ಬ ವ್ಯಕ್ತಿಯನ್ನು ಕುಲಪತಿಯು ಅನುಮೋದಿಸದಿದ್ದರೆ ಅಥವಾ ಹಾಗೆ ಶಿಫಾರಸು ಮಾಡಲಾದ ವ್ಯಕ್ತಿಯು ನೇಮಕಾತಿಯನ್ನು ಅಂಗೀಕರಿಸಲು ಇಚ್ಛಿಸದಿದ್ದರೆ, ಕುಲಪತಿಯು ಸಮಿತಿಯಿಂದ ಹೊಸ ಶಿಫಾರಸ್ಸನ್ನು ತರಿಸಿಕೊಳ್ಳಬಹುದು.

1[(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಮಿತಿಯು, ಕುಲಪತಿಯು ನಾಮನಿರ್ದೇಶಿಸಿದ ಒಬ್ಬರು, ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಒಬ್ಬರು ಮತ್ತು ಸಿಂಡಿಕೇಟ್ ನಾಮನಿರ್ದೇಶಿಸಿದ ಒಬ್ಬರು-ಹೀಗೆ ಈ ಮೂವರು ವ್ಯಕ್ತಿಗಳನ್ನು ಒಳಗೊಂಡ, ರಾಜ್ಯ ಸರ್ಕಾರವು ರಚಿಸಿದ ಒಂದು ಶೋಧನಾ ಸಮಿತಿಯಾಗಿರತಕ್ಕದ್ದು. ರಾಜ್ಯ ಸರ್ಕಾರವು, ಸದಸ್ಯರಲ್ಲಿ ಒಬ್ಬನನ್ನು ಸಮಿತಿಯ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕದ್ದು. ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಯು ಅಥವಾ ಸರ್ಕಾರದ ಉಪಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತನು ಶೋಧನಾ ಸಮಿತಿಯ ಸಂಚಾಲಕನಾಗಿರತಕ್ಕದ್ದು.]1

1. 2014ರ ಆಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

(4)ಉಪ-ಕುಲಪತಿಯು, ಕುಲಪತಿಯ ಇಚ್ಛಾನುಸಾರವಾಗಿ ಮತ್ತು (2)ನೇ ಉಪ-ಪ್ರಕರಣದ ಉಪ-ಬಂಧಗಳಿಗೆ ಒಳಪಟ್ಟು ಮೂರು ವರ್ಷಗಳ ಅವಧಿಗೆ ಪದಧಾರಣ ಮಾಡತಕ್ಕದ್ದು, 1[ಎರಡನೇ ಅವಧಿಗೆ ಮರುನೇಮಕಕ್ಕಾಗಿ ಅವನು ಅರ್ಹನಾಗಿರತಕ್ಕದ್ದಲ್ಲ]1

2[XXX]2

1[ಪರಂತು]1 ಉಪ-ಕುಲಪತಿಯನ್ನು ಕುಲಪತಿಯಿಂದ ನೇಮಕಗೊಂಡ ಸರ್ವೋಚ್ಛ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಸೇವೆಯಲ್ಲಿರುವ ಅಥವಾ ನಿವೃತ್ತ ನ್ಯಾಯಮೂರ್ತಿಯವರಿಂದ ಯಥೋಚಿತ ವಿಚಾರಣೆಯ ತರುವಾಯ ದುರ್ವರ್ತನೆ, ದುರಾಡಳಿತ, ಅಸಮರ್ಥತೆ ಅಥವಾ ಇತರ ಕಾರಣದ ಮೇಲೆ ಹೊರಡಿಸಲಾದ ಆದೇಶದ ಹೊರತು ಹುದ್ಧೆಯಿಂದ ತೆಗೆದುಹಾಕತಕ್ಕದ್ದಲ್ಲ.

1. 2014ರ ಆಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.
2. 2014ರ ಅಧಿನಿಯಮ ಸಂಖ್ಯೆ 1ರ ಮೂಲಕ ದಿನಾಂಕ: 01.01.2014ರಿಂದ ಬಿಟ್ಟುಬಿಡಲಾಗಿದೆ.

(5) ರಜೆ, ಅನಾರೋಗ್ಯ ಅಥವಾ ಇತರ ಯಾವುದೇ ಕಾರಣದಿಂದಾಗಿ ಉಪ-ಕುಲಪತಿಯ ತಾತ್ಕಾಲಿಕ ಗೈರುಹಾಜರಿಯ ಕಾಲದಲ್ಲಿ ಕುಲಪತಿಯು, ಉಪ-ಕುಲಪತಿಯ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ವ್ಯವಸ್ಥೆಗಳನ್ನು ಮಾಡತಕ್ಕದ್ದು:

ಪರಂತು, ಕುಲಪತಿಯು, ಅಂಥ ವ್ಯವಸ್ಥೆಯನ್ನು ಮಾಡುವವರೆಗೆ, ಪ್ರೊ-ಚಾನ್ಸಲರು, ಒಂದು ತಿಂಗಳಿಗೆ ಮೀರದ ಅವಧಿಗೆ ಅಥವಾ ಕುಲಪತಿಯು ವ್ಯವಸ್ಥೆ ಮಾಡುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಆ ಅವಧಿಯಲ್ಲಿ ಉಪ-ಕುಲಪತಿಯ ಪ್ರಸ್ತುತ ಕರ್ತವ್ಯಗಳನ್ನು ನಿರ್ವಹಿಸಲು ವಿಶ್ವವಿದ್ಯಾಲಯದ ಡೀನರ ಪೈಕಿ ಒಬ್ಬರನ್ನು ನಾಮ ನಿರ್ದೇಶನ ಮಾಡಬಹುದು.

**13. ಉಪ-ಕುಲಪತಿಯ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಉಪ-ಕುಲಪತಿಯು, ವಿಶ್ವವಿದ್ಯಾಲಯದ ಪ್ರಧಾನ ಕಾರ್ಯಕಾರಿ ಮತ್ತು ವಿದ್ಯಾ ವಿಷಯಕ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ಅವುಗಳ ಮೇಲೆ ನಿಯಂತ್ರಣ ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಎಲ್ಲ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೊಳಿಸತಕ್ಕದ್ದು. ವಿಶ್ವವಿದ್ಯಾಲಯದಲ್ಲಿ ಯುಕ್ತ ಶಿಸ್ತುಪಾಲನೆಗಾಗಿ ಅವಶ್ಯವಾಗುವ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಉಪ-ಕುಲಪತಿಯು, ಯಾವುದೇ ವಿಷಯದ ಮೇಲೆ ತಕ್ಷಣದ ಕ್ರಮವು ಅವಶ್ಯಕವೆಂದು ಅಭಿಪ್ರಾಯಪಟ್ಟರೆ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಕ್ಕೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಬಹುದು ಮತ್ತು ಅಂಥ ವಿಷಯದ ಮೇಲೆ ತಾನು ಕೈಗೊಂಡ ಕ್ರಮದ ಬಗ್ಗೆ ಅಂಥ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು:

ಪರಂತು, ಸಂಬಂಧಪಟ್ಟ ಪ್ರಾಧಿಕಾರವು ಅಂಥ ಕ್ರಮವನ್ನು ಕೈಗೊಳ್ಳಬಾರದಿತ್ತೆಂದು ಅಭಿಪ್ರಾಯಪಟ್ಟರೆ, ಅದು ಅ ವಿಷಯವನ್ನು ಕುಲಪತಿಗೆ ಕಳುಹಿಸತಕ್ಕದ್ದು ಮತ್ತು ಅದರ ಮೇಲಣ ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಉಪ-ಕುಲಪತಿಯು, ಶಾಸನಗಳು ಮತ್ತು ಅಧ್ಯಾದೇಶಗಳಿಂದ ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(4) ಉಪ-ಕುಲಪತಿಯು, ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸಭೆಗಳನ್ನು ಕರೆಯತಕ್ಕದ್ದು ಮತ್ತು ಅವನು ಲಿಖಿತ ಆದೇಶದ ಮೂಲಕ ಯಾವುವೇ ಸದರಿ ಸಭೆಗಳನ್ನು ಕರೆಯುವ ಅಧಿಕಾರವನ್ನು ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು. ಅವನು ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು ಮತ್ತು ಕುಲಪತಿಯವರ ಗೈರುಹಾಜರಿಯಲ್ಲಿ ಸಮಿತಿಯ ಅಧ್ಯಕ್ಷತೆ ವಹಿಸತಕ್ಕದ್ದು.

(5) ಉಪ-ಕುಲಪತಿಯು, ಈ ಅಧಿನಿಯಮದ ಉಪಬಂಧಗಳು ಮತ್ತು ಅದರಡಿಯಲ್ಲಿ ಮಾಡಲಾದ ಶಾಸನಗಳು, ಅಧ್ಯಾದೇಶಗಳು, ಮತ್ತು ನಿಯಮಗಳ ನಿಷ್ಠಾಪೂರ್ವಕ ಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(6) ಉಪ-ಕುಲಪತಿಯು, ವಾರ್ಷಿಕ ಹಣಕಾಸು ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳು ಮತ್ತು ಆಯವ್ಯಯ ಪಟ್ಟಿಯನ್ನು ಸಿಂಡಿಕೇಟಿಗೆ ಸಲ್ಲಿಸುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(7) ಉಪ-ಕುಲಪತಿಯು, ವಿಶ್ವವಿದ್ಯಾಲಯದ ಯುಕ್ತ ಆಡಳಿತ ನಿರ್ವಹಣೆಗೆ ಮತ್ತು ಬೋಧನೆ, ಸಂಶೋಧನೆ ಮತ್ತು ಜ್ಞಾನ ಪ್ರಸಾರಗಳಲ್ಲಿ ನಿಕಟವಾದ ಸಮನ್ವಯತೆ ಹಾಗೂ ಸಮಗ್ರತೆಯನ್ನು ತರುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

**14. ವ್ಯಾಸಂಗ ವಿಭಾಗಗಳ ಡೀನರು.-** ವ್ಯಾಸಂಗ ವಿಭಾಗಗಳ ಡೀನರ ನೇಮಕಾತಿ ವಿಧಾನ ಮತ್ತು ಅಧಿಕಾರಗಳು ಹಾಗೂ ಕರ್ತವ್ಯಗಳು ಶಾಸನಗಳಿಂದ ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

**15. ರಿಜಿಸ್ಟ್ರಾರ್.-** 1[(1) ರಿಜಿಸ್ಟ್ರಾರ್‌ನು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ರಾಜ್ಯ ಸರ್ಕಾರವು, ಭಾರತೀಯ ಆಡಳಿತ ಸೇವೆಗೆ ಸೇರಿದ ಹಿರಿಯ ಶ್ರೇಣಿಯಲ್ಲಿನ ಒಬ್ಬ ಅಧಿಕಾರಿಯನ್ನು ಅಥವಾ ಕರ್ನಾಟಕ ಆಡಳಿತ ಸೇವೆಗೆ ಸೇರಿದ, ಸೂಪರ್‌ಟೈಮ್ ವೇತನ ಶ್ರೇಣಿಯ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು, ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿ ನೇಮಕ ಮಾಡತಕ್ಕದ್ದು.]1

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

(2) ರಿಜಿಸ್ಟ್ರಾರನ ವೇತನ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳು ಸಿಂಡಿಕೇಟು ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

(3) ರಿಜಿಸ್ಟ್ರಾರನು, ವಿಶ್ವವಿದ್ಯಾಲಯದ ದಾಖಲೆಗಳು ಮತ್ತು ಸಾಮಾನ್ಯ ಮೊಹರುಗಳನ್ನು ಸೂಕ್ತ ಅಭಿರಕ್ಷೆಯಲ್ಲಿರಿಸಲು ಜವಾಬ್ದಾರನಾಗಿರತಕ್ಕದ್ದು. ಅವನು ವಿಶ್ವವಿದ್ಯಾಲಯದ ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತುಗಳ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು. ಕಛೇರಿ ವ್ಯವಹರಣೆಗಳಿಗೆ ಅವಶ್ಯವಾಗಬಹುದಾದ ಅಂಥ ಎಲ್ಲ ಮಾಹಿತಿಗಳನ್ನೂ ಸಹ ಅವನು ಅವುಗಳಿಗೆ ಸಲ್ಲಿಸಲು ಬದ್ಧನಾಗಿರತಕ್ಕದ್ದು. ಅವನು ಎಲ್ಲ ಪಠ್ಯಕ್ರಮಗಳು, ಪಠ್ಯ ವಿಷಯ ಹಾಗೂ ಅವಶ್ಯವಾಗಬಹುದಾದ ಇತರ ಮಾಹಿತಿಗಳ ಬಗ್ಗೆ ಶಾಶ್ವತ ದಾಖಲೆಗಳನ್ನು ಇರಿಸತಕ್ಕದ್ದು.

(4) ಸಿಂಡಿಕೇಟ್ ಅಥವಾ ಉಪ-ಕುಲಪತಿಯು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಶಾಸನಗಳು, ಅಧ್ಯಾದೇಶಗಳು ಮತ್ತು ನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**16. ರಿಜಿಸ್ಟ್ರಾರ್ (ಮೌಲ್ಯಮಾಪನ).-** 1[(1) ರಿಜಿಸ್ಟ್ರಾರನು (ಮೌಲ್ಯಮಾಪನ) ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ರಾಜ್ಯ ಸರ್ಕಾರವು, ಸಮೂಹ ಎ ದರ್ಜೆ ಹಿರಿಯ ವೇತನ ಶ್ರೇಣಿಗೆ ಕಡಿಮೆಯಿರದ ಕರ್ನಾಟಕ ಆಡಳಿತ ಸೇವೆಗೆ ಸೇರಿದ ಒಬ್ಬ ಅಧಿಕಾರಿಯನ್ನಾಗಲಿ ಅಥವಾ ಪ್ರಾಧ್ಯಾಪಕ ಹುದ್ದೆಯಲ್ಲಿ ಕನಿಷ್ಟಪಕ್ಷ ಐದು ವರ್ಷಗಳ ನಿರಂತರ ಸೇವೆ ಸಲ್ಲಿಸಿದ ಸ್ವಾಯತ್ತ ಸರ್ಕಾರಿ ವೈದ್ಯಕೀಯ ಸಂಸ್ಥೆಯ ಒಬ್ಬ ಪ್ರಾಧ್ಯಾಪಕರನ್ನಾಗಲಿ ರಿಜಿಸ್ಟ್ರಾರ್ (ಮೌಲ್ಯಮಾಪನ) ಆಗಿ ನೇಮಿಸತಕ್ಕದ್ದು.]1

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

(2) ಅವನು ವಿಶ್ವವಿದ್ಯಾಲಯದಲ್ಲಿ ಪರೀಕ್ಷೆಗಳನ್ನು ನಡೆಸುವ ರೀತಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಪ್ರಭಾರವನ್ನು ಹೊಂದಿರತಕ್ಕದ್ದು ಮತ್ತು ಶಾಸನಗಳು ಅಥವಾ ಅಧ್ಯಾದೇಶಗಳ ಮೂಲಕ ನಿಯಮಿಸಬಹುದಾದ ಅಥವಾ ಉಪ-ಕುಲಪತಿಯು ನಿರ್ದೇಶಿಸಬಹುದಾದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(3) ರಿಜಿಸ್ಟ್ರಾರನ (ಮೌಲ್ಯಮಾಪನ) ಸಂಬಳ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳು, ಶಾಸನಗಳು ಅಥವಾ ಅಧ್ಯಾದೇಶಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

**17. ಹಣಕಾಸು ಅಧಿಕಾರಿ.- 1**[(1) ಹಣಕಾಸು ಅಧಿಕಾರಿಯು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ರಾಜ್ಯ ಸರ್ಕಾರವು, ರಾಜ್ಯ ಲೆಕ್ಕಪತ್ರಗಳ ಇಲಾಖೆಯಲ್ಲಿ ಜಂಟಿ ನಿಯಂತ್ರಕರ ವೃಂದಕ್ಕೆ ಸೇರಿದ ಒಬ್ಬ ಅಧಿಕಾರಿಯನ್ನು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯನ್ನಾಗಿ ನೇಮಿಸತಕ್ಕದ್ದು.]1

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

(2) ಹಣಕಾಸು ಅಧಿಕಾರಿಯ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು, ಶಾಸನಗಳು ಅಥವಾ ಅಧ್ಯಾದೇಶಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಅವನು ವಿಶ್ವವಿದ್ಯಾಲಯದ ಸ್ವತ್ತು ಮತ್ತು ಹೂಡಿಕೆಗಳನ್ನು ನಿರ್ವಹಿಸತಕ್ಕದ್ದು. ಹಣಕಾಸು ನೀತಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಅವನು ಉಪ-ಕುಲಪತಿಗೆ ಸಲಹೆ ನೀಡತಕ್ಕದ್ದು. ವಾರ್ಷಿಕ ಹಣಕಾಸು ಅಂದಾಜು ಮತ್ತು ವಾರ್ಷಿಕ ಲೆಕ್ಕಪತ್ರಗಳು ಮತ್ತು ಆಯವ್ಯಯಪಟ್ಟಿಯನ್ನು ಸಿದ್ಧಪಡಿಸುವುದನ್ನು ಒಳಗೊಂಡು ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಸೂಕ್ತ ನಿರ್ವಹಣೆಯ ಜವಾಬ್ದಾರಿಯನ್ನು ಅವನು ಹೊಂದಿರತಕ್ಕದ್ದು.

(4) ವಿಶ್ವವಿದ್ಯಾಲಯವು ಸಿಂಡಿಕೇಟು ಅನುಮೋದಿಸಿರುವ ಆಯವ್ಯಯ ಅಂದಾಜುಗಳಲ್ಲಿ ಅಧಿಕೃತಗೊಳಿಸಿರದ ಯಾವುದೇ ವೆಚ್ಚವನ್ನು ಮಾಡಿಲ್ಲವೆಂಬುದನ್ನು ಅವನು ಖಚಿತಪಡಿಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರಿಯು ಮಂಜೂರಾತಿ ನೀಡಿಲ್ಲದ ಯಾವುದೇ ವೆಚ್ಚವನ್ನು ಮಾಡಲು ಅವನು ಅನುಮತಿಸತಕ್ಕದ್ದಲ್ಲ.

**1[18 ಇತರ ಅಧಿಕಾರಿಗಳು.–** 9ನೇ ಪ್ರಕರಣದ (ಡ)ನೇ ಖಂಡದಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ ನೇಮಕಾತಿ ವಿಧಾನ ಮತ್ತು ಸೇವಾ

ಷರತ್ತುಗಳು ಶಾಸನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಅಥವಾ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳ ಅಧಿಕಾರಿಗಳನ್ನು ಮೂರು ವರ್ಷಗಳನ್ನು ಮೀರದಂಥ ಅವಧಿಗೆ ಪ್ರತಿನಿಯೋಜಿಸತಕ್ಕದ್ದು, ಆದರೆ ಅಂಥ ಯಾರೇ ಅಧಿಕಾರಿಗಳನ್ನು ವಿಶ್ವವಿದ್ಯಾಲಯದಲ್ಲಿನ ಯಾವುದೇ ಆಡಳಿತಾತ್ಮಕ ಹುದ್ದೆಗಳಿಗೆ ಯಾವುದೇ ಅನುದಾನಿತ ಅಥವಾ ಅನುದಾನ ರಹಿತ ಖಾಸಗಿ ಕಾಲೇಜುಗಳಿಂದ ಅಥವಾ ಶಿಕ್ಷಣ ಸಂಸ್ಥೆಗಳಿಂದ ಪ್ರತಿನಿಯೋಜನೆ ಮಾಡಿಕೊಳ್ಳತಕ್ಕದ್ದಲ್ಲ. ಅಂಥ ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು ಹಾಗೂ ಸೇವಾ ಷರತ್ತುಗಳು ಶಾಸನಗಳ ಮೂಲಕ ನಿಯಮಿಸಬಹುದಾದಂತಿರತಕ್ಕದ್ದು.]**1**

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

**19. ವಿಶ್ವವಿದ್ಯಾಲಯದ ಅಧಿಕಾರಿಗಳು ಶಾಸನಗಳ ಮೂಲಕ ಒದಗಿಸಿದುದನ್ನು ಬಿಟ್ಟು ಯಾವುದೇ ಇತರ ಗೌರವಧನವನ್ನು ಪಡೆಯಬಾರದು.-** ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ, ಅವರ ಸಂಬಳ, ಭತ್ಯೆ ಮತ್ತು ಸೇವಾ ಷರತ್ತುಗಳನ್ನು ವಿನಿಯಮಿಸುವ ಶಾಸನಗಳು ಅಥವಾ ಇತರ ಆದೇಶಗಳಲ್ಲಿ ಒದಗಿಸಿರುವುದನ್ನುಳಿದು ವಿಶ್ವವಿದ್ಯಾಲಯದ ಯಾವುದೇ ಕಾರ್ಯಕ್ಕಾಗಿ ಯಾವುದೇ ಗೌರವ ಧನವನ್ನು ನೀಡತಕ್ಕದ್ದಲ್ಲ ಅಥವಾ ಅವರು ಅದನ್ನು ಸ್ವೀಕರಿಸತಕ್ಕದ್ದಲ್ಲ.

## ಅಧ್ಯಾಯ IV

## ವಿಶ್ವವಿದ್ಯಾಲಯದ ಪ್ರಾಧಿಕಾರಗಳು

**20. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.-** ಈ ಮುಂದಿನವುಗಳು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು ಎಂದರೆ:-

(i) ಸೆನೆಟ್;

(ii) ಸಿಂಡಿಕೇಟು;

(iii) ವಿದ್ಯಾವಿಷಯಕ ಪರಿಷತ್ತು;

(vi) ಯೋಜನಾ ಮಂಡಲಿ;

(v) ಹಣಕಾಸು ಸಮಿತಿ;

(vi) ಅಧ್ಯಯನ ಮಂಡಲಿ;

(vii)ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂಬುದಾಗಿ ಶಾಸನಗಳ ಮೂಲಕ ಘೋಷಿಸಬಹುದಾದ ಅಂಥ ಇತರ ನಿಕಾಯಗಳು.

**21. ಸೆನೆಟು.-** (1) ಸೆನೆಟು ಈ ಕೆಳಕಂಡ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ;-

(i) ಉಪ-ಕುಲಪತಿ;

(ii) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವನಿಂದ ನಾಮನಿರ್ದೇಶಿತನಾದ, ಸರ್ಕಾರದ ಉಪ-ಕಾರ್ಯದರ್ಶಿ ದರ್ಜೆಗೆ ಕಡಿಮೆ ಇಲ್ಲದ ವ್ಯಕ್ತಿ;

1[(iii) ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವನಿಂದ ನಾಮನಿರ್ದೇಶಿತನಾದ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ವ್ಯಕ್ತಿ.]1

(iv) ವೈದ್ಯಕೀಯ ಶಿಕ್ಷಣದ ನಿರ್ದೇಶಕರು;

(v) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು;

(vi) ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶಕರು;

(vii) ಕರ್ನಾಟಕ ವಿಧಾನಸಭೆಯ ಸದಸ್ಯರ ಪೈಕಿ ಚುನಾಯಿತರಾದ ಮೂವರು ಸದಸ್ಯರು;

(viii) ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರ ಪೈಕಿ ಚುನಾಯಿತರಾದ ಇಬ್ಬರು ಸದಸ್ಯರು;

(ix) ಕುಲಪತಿಯು ಉಪ-ಕುಲಪತಿಯೊಡನೆ ಸಮಾಲೋಚಿಸಿ, ಆರೋಗ್ಯ ವಿಜ್ಞಾನದಲ್ಲಿ ವಿಶೇಷ ಆಸಕ್ತಿ ಹೊಂದಿರುವ ವ್ಯಕ್ತಿಗಳ ಪೈಕಿ ನಾಮ ನಿರ್ದೇಶನ ಮಾಡಿದ ಆರು ಜನರು, ಇವರಲ್ಲಿ, ಒಬ್ಬನು ಅನುಸೂಚಿತ ಜಾತಿಗೆ, ಒಬ್ಬನು ಅನುಸೂಚಿತ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು ಮತ್ತು ಒಬ್ಬ ವ್ಯಕ್ತಿ ಮಹಿಳೆಯಾಗಿರತಕ್ಕದ್ದು;

(x) ಪ್ರೊ-ಚಾನ್ಸಲರು, ಆರೋಗ್ಯ ವಿಜ್ಞಾನ ಪದವೀಧರರ ಪೈಕಿ ನಾಮ ನಿರ್ದೇಶನ ಮಾಡಿದ ಐದು ಜನರು;

(xi) ಪ್ರಾಧ್ಯಾಪಕರ ಪೈಕಿ ಚುನಾಯಿತರಾದ ಐದು ಜನ ಪ್ರಾಧ್ಯಾಪಕರು;

(xii) ಪ್ರಾಧ್ಯಾಪಕರನ್ನು ಬಿಟ್ಟು ಶಿಕ್ಷಕರ ಪೈಕಿ ಆಯ್ಕೆಯಾದ ಐದು ಜನ ಶಿಕ್ಷಕರು.

1[(xiii) ಭಾರತ ವೈದ್ಯಕೀಯ ಪರಿಷತ್ತು, ಭಾರತ ದಂತ ವೈದ್ಯಕೀಯ ಪರಿಷತ್ತು,

ಭಾರತ ಔಷಧ ಪರಿಷತ್ತು, ಇಂಡಿಯನ್ ನರ್ಸಿಂಗ್ ಕೌನ್ಸಿಲ್, ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್ ಮತ್ತು ಸೆಂಟ್ರಲ್ ಕೌನ್ಸಿಲ್ ಆಫ್ ಹೋಮಿಯೋಪತಿ- ಇವುಗಳಿಗೆ ತಲಾ ಒಬ್ಬರಂತೆ ಕರ್ನಾಟಕ ವಿಭಾಗದಿಂದ ಚುನಾಯಿತರಾಗಿರುವ ಒಟ್ಟು ಆರು ಜನ ಸದಸ್ಯರು]1

(xiv) ಕುಲಪತಿಯು ಉಪ-ಕುಲಪತಿಯೊಂದಿಗೆ ಸಮಾಲೋಚಿಸಿ ಸರದಿಯ ಮೇಲೆ ಮೂರು ವರ್ಷಗಳ ಅವಧಿಗೆ ನಾಮ ನಿರ್ದೇಶಿಸಿರುವ ಕಾಲೇಜುಗಳ ಮುಖ್ಯಸ್ಥರು - ಆರು ಜನ.

(2) ವಿಶ್ವವಿದ್ಯಾಲಯದ ಅಥವಾ ಸಂಯೋಜಿತ ಕಾಲೇಜಿನ ಯಾವೊಬ್ಬ ಶಿಕ್ಷಕೇತರ ನೌಕರನೂ ಸೆನೆಟಿನಿಂದ ಚುನಾಯಿತನಾಗಲು ಅಥವಾ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

**22. ಸೆನೆಟಿನ ಸಭೆಗಳು.**- (1) ಉಪ-ಕುಲಪತಿಯು ಗೊತ್ತುಪಡಿಸುವ ದಿನಾಂಕಗಳಂದು ಕನಿಷ್ಠಪಕ್ಷ ವರ್ಷಕ್ಕೆ ಎರಡು ಸಾರಿ ಸೆನೆಟು ಸಭೆ ಸೇರತಕ್ಕದ್ದು, ಅಂಥ ಒಂದು ಸಭೆಯು ವಾರ್ಷಿಕ ಸಭೆಯಾಗಿರತಕ್ಕದ್ದು.

(2) ಹಿಂದಿನ ವರ್ಷದಲ್ಲಿ ನಡೆದ ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಯ ಬಗೆಗಿನ ವರದಿಯನ್ನು ಸ್ವೀಕೃತಿಗಳು ಮತ್ತು ವೆಚ್ಚ, ಹಣಕಾಸು ಅಂದಾಜು ಹಾಗೂ ಹಿಂದಿನ ಲೆಕ್ಕ ಪರಿಶೋಧನೆಯ ವರದಿಯೊಂದಿಗೆ (1)ನೇ ಉಪಪ್ರಕರಣದ ಅಡಿಯಲ್ಲಿ ಕರೆಯಲಾಗುವ ವಾರ್ಷಿಕ ಸೆನೆಟ್ ಸಭೆಯಲ್ಲಿ, ಸೆನೆಟಿನ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು.

(3) ಉಪ-ಕುಲಪತಿಯು, ಅವನು ಸೂಕ್ತವೆಂದು ಭಾವಿಸಿದಾಗಲೆಲ್ಲ ಮತ್ತು ಸೆನೆಟ್ ಹದಿನೈದು ಜನರಿಗೆ ಕಡಿಮೆಯಿಲ್ಲದಷ್ಟು ಸಂಖ್ಯೆಯ ಸದಸ್ಯರು ಸಹಿ ಮಾಡಿರುವ ಲಿಖಿತ ಕೋರಿಕೆ ಸಲ್ಲಿಸಿದಾಗ, ಸೆನೆಟಿನ ವಿಶೇಷ ಸಭೆಯನ್ನು ಕರೆಯತಕ್ಕದ್ದು.

**23. ಸೆನೆಟಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.**- (1) ಸೆನೆಟು ವಿಶ್ವವಿದ್ಯಾಲಯದ ಕಾರ್ಯನೀತಿಯನ್ನು ಕಾಲಕಾಲಕ್ಕೆ ಪರಿಶೀಲಿಸಿ ವಿಶ್ವವಿದ್ಯಾಲಯದ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಕ್ರಮಗಳನ್ನು ಸೂಚಿಸಲು ಹಾಗೂ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಪರಿಶೀಲಿಸಿ, ನಿರ್ಣಯಗಳನ್ನು ಹೊರಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧ ಕಲ್ಪಿಸಿದ ಹೊರತು, ಸೆನೆಟ್ ಈ ಕೆಳಕಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ಪದವಿ, ಡಿಪ್ಲೊಮಾ ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಸ್ಥಾಪಿಸುವುದು ಮತ್ತು ಪ್ರದಾನ ಮಾಡುವುದು;

(ii) ಸಿಂಡಿಕೇಟಿನ ಶಿಫಾರಸಿನ ಮೇರೆಗೆ ಗೌರವ ಪದವಿ ಮತ್ತು ಇತರ ವಿದ್ಯಾ ವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(iii) ಶಾಸನಗಳನ್ನು ರಚಿಸುವುದು, ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು.

(iv) ಸಿಂಡಿಕೇಟು ಸಿದ್ಧಪಡಿಸಿದ ಹಣಕಾಸು ಅಂದಾಜುಗಳನ್ನು ಪರಿಶೀಲಿಸಿ ನಿರ್ಣಯಗಳನ್ನು ಹೊರಡಿಸುವುದು;

(v) ಸಿಂಡಿಕೇಟಿನ ಶಿಫಾರಸಿನ ಮೇಲೆ ಪ್ರೊಫೆಸರ್ ಆಫ್ ಮೆರಿಟಸ್ ಬಿರುದನ್ನು ಪ್ರದಾನ ಮಾಡುವುದು;

(vi) ಶಾಸನಗಳು, ಅಧ್ಯಾದೇಶಗಳು ಮತ್ತು ನಿಯಮಗಳ ಮೂಲಕ ಪ್ರದತ್ತವಾಗುವ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**24. ಸಿಂಡಿಕೇಟ್.**- ಸಿಂಡಿಕೇಟು ಈ ಕೆಳಕಂಡ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:-

(i) ಉಪ-ಕುಲಪತಿ.

1[(i–ಎ) ಆರೋಗ್ಯ ಮತ್ತು ಕುಟುಂಬ ಕಲ್ಯಾಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವನಿಂದ ನಾಮನಿರ್ದೇಶಿತನಾದ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ವ್ಯಕ್ತಿ;

(i–ಬಿ) ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವನಿಂದ ನಾಮನಿರ್ದೇಶಿತನಾದ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ವ್ಯಕ್ತಿ.]1

(ii) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ, ಇದರ ನಿರ್ದೇಶಕರು;

(iii) ಕರ್ನಾಟಕ ವೈದ್ಯಕೀಯ ಶಿಕ್ಷಣ ನಿರ್ದೇಶಕರು;

(iv) ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ನಿರ್ದೇಶಕರು;

(v) ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ನಿನ ಕರ್ನಾಟಕ ವಿಭಾಗದ ಅಧ್ಯಕ್ಷರು;

(vi) ಅಧ್ಯಕ್ಷ, ಕರ್ನಾಟಕ ವೈದ್ಯಕೀಯ ಪರಿಷತ್ತು;

(vii) ಸೆನೆಟ್ ಸದಸ್ಯರ ಪೈಕಿ ಆಯ್ಕೆಯಾದ ಮೂರು ಜನ ಸದಸ್ಯರು;

(viii) ಉಪ-ಕುಲಪತಿಯು ಪ್ರತಿ ಎರಡು ವರ್ಷದ ಅವಧಿಗೆ ಸರದಿಯ ಮೇಲೆ ನಾಮನಿರ್ದೇಶನ ಮಾಡುವ ಒಬ್ಬ ಪ್ರಾಧ್ಯಾಪಕ;

(ix) ಉಪ-ಕುಲಪತಿಯು ವಾರ್ಷಿಕ ಸರದಿಯ ಮೇಲೆ ನಾಮನಿರ್ದೇಶನ ಮಾಡುವ, ವಿಶ್ವವಿದ್ಯಾಲಯ ಅಥವಾ ಸಂಯೋಜಿತ ಕಾಲೇಜುಗಳ ಇಬ್ಬರು ಮುಖ್ಯಸ್ಥರು;

2[(x) ಸ್ವಾಯತ್ತ ಸರ್ಕಾರಿ ವೈದ್ಯಕೀಯ ಸಂಸ್ಥೆಯಿಂದ ಸರ್ಕಾರವು ವಾರ್ಷಿಕ ಸುತ್ತು ಸರದಿಯಂತೆ ನಾಮನಿರ್ದೇಶಿಸುವ ಒಬ್ಬ ನಾಮನಿರ್ದೇಶಿತ]2

(xi) ಉಪ-ಕುಲಪತಿಯ ಶಿಫಾರಸಿನ ಮೇಲೆ ಕುಲಪತಿಯು ನಾಮನಿರ್ದೇಶನ ಮಾಡುವ ಆರೋಗ್ಯ ವಿಜ್ಞಾನ ಕ್ಷೇತ್ರದ ಮೂರು ಜನ ತಜ್ಞರು.

1[(xii) ಆರೋಗ್ಯ ವಿಜ್ಞಾನಗಳ ಕ್ಷೇತ್ರದಲ್ಲಿನ ಪರಿಣಿತ ವ್ಯಕ್ತಿಗಳಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಆರು ವ್ಯಕ್ತಿಗಳು, ಅವರಲ್ಲಿ,-

(i) ಪರಿಶಿಷ್ಟ ಜಾತಿಗಳು ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದ ಒಬ್ಬ ವ್ಯಕ್ತಿ;

(ii) ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬ ವ್ಯಕ್ತಿ;

(iii) ಒಬ್ಬ ಮಹಿಳೆ;

(iv) ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿ; ಮತ್ತು

(v) ಇಬ್ಬರು ಇತರರು,

–ಇರತಕ್ಕದ್ದು:

ಪರಂತು, ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾಲಯದಲ್ಲಿ ಯಾವುದೇ ಸ್ಥಾನದಲ್ಲಿ ನಿಯೋಜಿತನಾಗಿರುವ ಯಾರೇ ವ್ಯಕ್ತಿಯು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.]1

(2) ಸಿಂಡಿಕೇಟನ ಸಭೆಗೆ, ಸಿಂಡಿಕೇಟನ ಏಳು ಜನ ಸದಸ್ಯರ ಸಂಖ್ಯೆಯು ಕೋರಂ ಆಗಿರತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಸೇರಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

**25. ಸಿಂಡಿಕೇಟನ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಸಿಂಡಿಕೇಟು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಪ್ರಾಧಿಕಾರವಾಗಿರತಕ್ಕದ್ದು.

(2) ಸಿಂಡಿಕೇಟಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

**26. ವಿದ್ಯಾವಿಷಯಕ ಪರಿಷತ್ತು.–** (1) ವಿದ್ಯಾವಿಷಯಕ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ವಿದ್ಯಾವಿಷಯದ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು, ಶಾಸನಗಳು ಮತ್ತು ಆಧ್ಯಾದೇಶಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ವಿದ್ಯಾ ವಿಷಯಕ ಕಾರ್ಯನೀತಿಯನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಸಾಮಾನ್ಯ ಮೇಲ್ವಿಚಾರಣೆಯನ್ನು ಚಲಾಯಿಸತಕ್ಕದ್ದು.

(2) ವಿದ್ಯಾ ವಿಷಯಕ ಪರಿಷತ್ತಿನ ರಚನೆ ಮತ್ತು ಅದರ ಅಧಿಕಾರಗಳು ಮತ್ತು ಪ್ರಕಾರ್ಯಗಳು, ಶಾಸನಗಳ ಮೂಲಕ ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

**27. ಯೋಜನಾ ಮಂಡಲಿ.–** (1) ಯೋಜನಾ ಮಂಡಲಿಯು, ವಿಶ್ವವಿದ್ಯಾಲಯದ ಪ್ರಧಾನ ಯೋಜನಾ ನಿಕಾಯವಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಧ್ಯೇಯಗಳಿಗೆ ಅನುಸಾರವಾಗಿ

ಸೂಚಿಸಲಾಗಿರುವ ರೀತಿಯಲ್ಲಿ ವಿಶ್ವವಿದ್ಯಾಲಯದ ಅಭಿವೃದ್ಧಿಯ ಮೇಲ್ವಿಚಾರಣೆ ನೋಡಿಕೊಳ್ಳುವ ಜವಾಬ್ದಾರಿ ಹೊಂದಿರತಕ್ಕದ್ದು.

(2) ಯೋಜನಾ ಮಂಡಲಿಯ ರಚನೆ ಮತ್ತು ಅದರ ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

**28. ಹಣಕಾಸು ಸಮಿತಿ.–** ಹಣಕಾಸು ಸಮಿತಿಯ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

**29. ಅಧ್ಯಯನ ಮಂಡಲಿ.–** ಪ್ರತಿಯೊಂದು ಬೋಧನೆ ಮತ್ತು ಸಂಶೋಧನ ವಿಭಾಗಕ್ಕೆ ಹೊಂದಿಕೊಂಡಂತೆ ಅಧ್ಯಯನ ಮಂಡಲಿ ಇರತಕ್ಕದ್ದು. ಅಧ್ಯಯನ ಮಂಡಲಿಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು ಶಾಸನಗಳ ಮೂಲಕ ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

**30. ವ್ಯಾಸಂಗ ವಿಭಾಗಗಳು.–** ವಿಶ್ವವಿದ್ಯಾಲಯದ ವ್ಯಾಸಂಗ ವಿಭಾಗಗಳು ಮತ್ತು ಅವುಗಳ ಸಂಯೋಜನೆಯು ಶಾಸನಗಳ ಮೂಲಕ ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

**31. ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರ ಪದಾವಧಿ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು, ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತುಗಳನ್ನು ಪ್ರತಿ ಮೂರು ವರ್ಷಗಳಿಗೆ ಒಮ್ಮೆ ಅಥವಾ ಸರಿಸುಮಾರು ಅದೇ ಸಮಯದಲ್ಲಿ ಪುನರ್‌ರಚಿಸತಕ್ಕದ್ದು ಮತ್ತು ಪ್ರಾಧಿಕಾರಗಳ ಸದಸ್ಯರು, ಪದನಿಮಿತ್ತ ಸದಸ್ಯರ ಸಂದರ್ಭವನ್ನು ಹೊರತುಪಡಿಸಿ, ಮುಂದಿನ ಪುನರ್‌ರಚನೆಯ ದಿನಾಂಕದವರೆಗೆ ಅದರ ಸದಸ್ಯರಾಗಿ ಪದವನ್ನು ಧಾರಣ ಮಾಡತಕ್ಕದ್ದು :

ಪರಂತು, 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುವೇ ಪ್ರಾಧಿಕಾರಗಳಲ್ಲಿ ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ಯಾವೊಬ್ಬ ವ್ಯಕ್ತಿಯು ಅಂಥ ಪ್ರಾಧಿಕಾರದಲ್ಲಿ ಎರಡು ಅನುಕ್ರಮ ಅವಧಿಗಳಿಗಿಂತಲೂ ಹೆಚ್ಚು ಬಾರಿ ಪದಧಾರಣ ಮಾಡತಕ್ಕದ್ದಲ್ಲ.

**32. ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರ ಚುನಾವಣೆ.–** ಸೆನೆಟ್, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಚುನಾಯಿತ ಸದಸ್ಯರ ಸಂದರ್ಭದಲ್ಲಿ, ಚುನಾವಣಾ ವಿಧಾನವು ಶಾಸನಗಳ ಮೂಲಕ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಇರತಕ್ಕದ್ದು.

## ಅಧ್ಯಾಯ V

## ಶಾಸನಗಳು, ಅಧ್ಯಾದೇಶಗಳು ಮತ್ತು ನಿಯಮಗಳು

**33. ಶಾಸನಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಈ ಮುಂದಿನ ವಿಷಯಗಳಿಗಾಗಿ ಶಾಸನಗಳು ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಘೋಷಿಸಬಹುದಾದ ಅಂಥ ಇತರ ನಿಕಾಯಗಳ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು;

(ಬಿ) ಸದರಿ ಪ್ರಾಧಿಕಾರಗಳು ಮತ್ತು ನಿಕಾಯಗಳ ಚುನಾವಣೆ ಮತ್ತು ಸದಸ್ಯರ ಪದದಲ್ಲಿ ಮುಂದುವರಿಕೆ ಹಾಗೂ ಸದಸ್ಯರ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು ಮತ್ತು ಈ ಪ್ರಾಧಿಕಾರಗಳು ಮತ್ತು ನಿಕಾಯಗಳಿಗೆ ಸಂಬಂಧಿಸುವ ಎಲ್ಲ ಇತರ ವಿಷಯಗಳು;

(ಸಿ) ಗೌರವ ಪದವಿಗಳನ್ನು ಪ್ರದಾನ ಮಾಡುವುದು;

(ಡಿ) ಪದವಿ ಪ್ರದಾನ ಮಾಡುವ ಸಲುವಾಗಿ ಘಟಕೋತ್ಸವಗಳನ್ನು ಏರ್ಪಡಿಸುವುದು;

(ಇ) ಪದವಿಗಳು, ಡಿಪ್ಲೋಮಾಗಳು, ಪ್ರಮಾಣ ಪತ್ರಗಳು ಮತ್ತು ಇತರ ವಿದ್ಯಾ ವಿಷಯಕ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು;

(ಎಫ್) ವ್ಯಾಸಂಗ ವಿಭಾಗ, ವಿಭಾಗಗಳು, ವಿದ್ಯಾರ್ಥಿನಿಲಯಗಳು, ಕಾಲೇಜುಗಳು ಮತ್ತು ಸಂಸ್ಥೆಗಳ ಸ್ಥಾಪನೆ, ನಿರ್ವಹಣೆ ಮತ್ತು ರದ್ದಿಯಾತಿ;

(ಜಿ)ಕಾಲೇಜುಗಳ ಸಂಯೋಜನೆಗೆ ಮತ್ತು ಸಂಯೋಜನೆಯನ್ನು ಹಿಂತೆಗೆದುಕೊಳ್ಳಲು ಷರತ್ತುಗಳು;

(ಹೆಚ್)ಫೆಲೋಷಿಪ್, ವಿದ್ಯಾರ್ಥಿ ವೇತನ, ಶಿಷ್ಯ ವೇತನ, ಪದಕಗಳು, ಪಾರಿತೋಷಕಗಳು ಮುಂತಾದವುಗಳನ್ನು ಸ್ಥಾಪಿಸುವುದು;

(ಐ) ಈ ಅಧಿನಿಯಮದಲ್ಲಿ ಈಗಾಗಲೇ ಅಂಥ ಷರತ್ತುಗಳನ್ನು ಗೊತ್ತುಪಡಿಸದಿದ್ದಲ್ಲಿ ಕಾರ್ಯಕಲಾಪಗಳಿಗಾಗಿ ಕೋರಂ ಗೊತ್ತುಪಡಿಸುವುದನ್ನೂ ಒಳಗೊಂಡಂತೆ ಪ್ರಾಧಿಕಾರಗಳ ಚುನಾವಣಾ ಪ್ರಕ್ರಿಯೆ ಮತ್ತು ಪ್ರಾಧಿಕಾರಗಳ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಜೆ) ವಿಶ್ವವಿದ್ಯಾಲಯದ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಬೋಧಕರ ವರ್ಗೀಕರಣ;

(ಕೆ) ಮರಣ ಶಾಸನ ದಾನಗಳು, ದಾನಗಳು ಮತ್ತು ದತ್ತಿನಿಧಿಗಳನ್ನು ಸ್ವೀಕರಿಸುವುದು ಮತ್ತು ನಿರ್ವಹಿಸುವುದು;

(ಎಲ್) ಪದವೀಧರರ ನೋಂದಣಿ ಮತ್ತು ವಿವಿಧ ವರ್ಗಗಳಿಗೆ ಸೇರಿದ ನೋಂದಾಯಿತ ಪದವೀಧರರ ರಿಜಿಸ್ಟರಿನ ನಿರ್ವಹಣೆ;

(ಎಂ) ಈ ಅಧಿನಿಯಮದ ಅಡಿಯಲ್ಲಿ ಶಾಸನಗಳನ್ನು ರಚಿಸುವುದು ಅಗತ್ಯವಾಗಿರುವ ಎಲ್ಲ ಇತರ ವಿಷಯಗಳು.

(2) ಕಾಲಕಾಲಕ್ಕೆ ರಾಜ್ಯದ ಕಾರ್ಯನೀತಿಗೆ ಅನುಸಾರವಾಗಿ, ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ನಾಗರಿಕರ ಇತರ ಹಿಂದುಳಿದ ವರ್ಗಗಳಿಗೆ ಸೇರಿದವರಿಗಾಗಿ ವಿಶ್ವವಿದ್ಯಾಲಯದಲ್ಲಿ ಕೆಲವೊಂದು ಹುದ್ದೆಗಳನ್ನು ಮೀಸಲಿಡುವ ಸಲುವಾಗಿ ಶಾಸನಗಳನ್ನು ರಚಿಸತಕ್ಕದ್ದು.

**34. ಶಾಸನಗಳನ್ನು ಮಾಡುವ ಬಗೆ.-** (1) ಸೆನೆಟು ಕಾಲಕಾಲಕ್ಕೆ ತಾನಾಗಿಯೇ ಆಗಲಿ ಅಥವಾ ಸಿಂಡಿಕೇಟು ಮಾಡಿದ ಕೋರಿಕೆಯ ಮೇಲಾಗಲೀ, ಹೊಸದಾಗಿ ಶಾಸನಗಳನ್ನು ರಚಿಸಬಹುದು ಅಥವಾ ತಿದ್ದುಪಡಿ ಮಾಡಬಹುದು ಅಥವಾ ಈಗ ಇರುವುದನ್ನು ನಿರಸನಗೊಳಿಸಬಹುದು.

(2) ಸೆನೆಟು ಅಂಗೀಕರಿಸಿದ ಪ್ರತಿಯೊಂದು ಶಾಸನವನ್ನು ಸರ್ಕಾರದ ಮೂಲಕ ಕುಲಪತಿಯ ಅನುಮೋದನೆಗಾಗಿ ಕಳುಹಿಸತಕ್ಕದ್ದು. ಸರ್ಕಾರವು ವಿಶ್ವವಿದ್ಯಾಲಯದಿಂದ ಶಾಸನಗಳನ್ನು ಅದು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ತನ್ನ ಅಭಿಪ್ರಾಯಗಳ ಸಹಿತ ಶಾಸನವನ್ನು ಕುಲಪತಿಗೆ ಕಳುಹಿಸತಕ್ಕದ್ದು. ಕುಲಪತಿಯು, ಸರ್ಕಾರದಿಂದ ಶಾಸನಗಳನ್ನು ಸ್ವೀಕರಿಸಿದ

ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಅದಕ್ಕೆ ಅನುಮೋದನೆಯನ್ನು ನೀಡಬಹುದು ಅಥವಾ ಅನುಮತಿ ತಡೆಹಿಡಿಯಬಹುದು ಅಥವಾ ಮರು ಪರಿಶೀಲನೆಗಾಗಿ ಸೆನೆಟಿಗೆ ಅದನ್ನು ಹಿಂದಿರುಗಿಸಬಹುದು.

(3) ಸೆನೆಟು ಅಂಗೀಕರಿಸಿದ ಯಾವುದೇ ಶಾಸನವು ಕುಲಪತಿಯಿಂದ ಅನುಮೋದನೆಯಾದ ಹೊರತು ಮಾನ್ಯವಾಗತಕ್ಕದ್ದಲ್ಲ ಮತ್ತು ರಾಜ್ಯಪತ್ರದಲ್ಲಿ ಅದು ಪ್ರಕಟವಾದ ದಿನಾಂಕದಿಂದ ಅಥವಾ ಕುಲಪತಿಯು ನಿಗದಿಪಡಿಸಬಹುದಾದ ಅಂಥ ಇತರ ದಿನಾಂಕದಿಂದ ಜಾರಿಯಲ್ಲಿ ಬರತಕ್ಕದ್ದು.

**35. ಅಧ್ಯಾದೇಶಗಳು.**- (1) ಸಿಂಡಿಕೇಟು, ಕಾಲಕಾಲಕ್ಕೆ ಅಧ್ಯಾದೇಶಗಳನ್ನು ರಚಿಸಿ ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(2) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು ಅಧ್ಯಾದೇಶವು ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ)ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾಲಯಕ್ಕೆ ಮತ್ತು ಅದರ ಸಂಯೋಜಿತ ಕಾಲೇಜುಗಳಿಗೆ ಪ್ರವೇಶಾವಕಾಶ ನೀಡುವುದು ಮತ್ತು ವಿಶ್ವವಿದ್ಯಾಲಯ, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯದ ಪ್ರಯೋಗಾಲಯಗಳಲ್ಲಿ ಪ್ರವೇಶಾವಕಾಶಕ್ಕಾಗಿ ಶುಲ್ಕ ವಿಧಿಸುವುದು;

(ಬಿ) ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೊಮಾಗಳು ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪಡೆಯುವುದಕ್ಕಾಗಿ ವ್ಯಾಸಂಗ ಕ್ರಮಗಳು;

(ಸಿ) ಪದವಿಗಳು, ಡಿಪ್ಲೊಮಾಗಳು ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡುವ ಬಗೆಗಿನ ಷರತ್ತುಗಳು;

(ಡಿ) ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ನಡೆಸುವ ಮತ್ತು ವಿದ್ಯಾರ್ಥಿಗಳಿಗೆ ಅಂಥ ಪರೀಕ್ಷೆಗಳಿಗೆ ಪ್ರವೇಶ ನೀಡುವ ಬಗೆಗಿನ ಷರತ್ತುಗಳು;

(ಇ) ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹಾಜರಾಗುವುದಕ್ಕೆ ಸಂಬಂಧಿಸಿದಂತೆ ವಿನಾಯಿತಿಯನ್ನು ನೀಡಬಹುದಾದಂಥ ರೀತಿ;

(ಎಫ್) ಪರೀಕ್ಷೆ ನಡೆಸುವ ನಿಕಾಯಗಳು ಮತ್ತು ಪರೀಕ್ಷಕರಿಗಾಗಿ ಷರತ್ತುಗಳು, ನೇಮಕಾತಿ ಬಗೆ ಮತ್ತು ಕರ್ತವ್ಯಗಳು;

(ಜಿ) ವಿದ್ಯಾರ್ಥಿಗಳಲ್ಲಿ ಶಿಸ್ತುಪಾಲನಾ ನಿರ್ವಹಣೆ;

(ಹೆಚ್)ವಿವಿಧ ವ್ಯಾಸಂಗ ಕ್ರಮಗಳು, ಸಂಶೋಧನೆ, ಪ್ರಯೋಗ ಮತ್ತು ಪ್ರಾಯೋಗಿಕ ತರಬೇತಿಗಾಗಿ ಹಾಗೂ ವಿವಿಧ ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ ಪ್ರವೇಶಾವಕಾಶಕ್ಕಾಗಿ ವಿಧಿಸಬೇಕಾದ ಫೀಜುಗಳು;

(ಐ) ಈ ಅಧಿನಿಯಮ ಅಥವಾ ಶಾಸನಗಳ ಮೂಲಕ ಅಥವಾ ಅಧ್ಯಾದೇಶಗಳಿಂದ "ಪಬಂಧ ಕಲ್ಪಿಸಬೇಕಾದ ಅಥವಾ ಕಲ್ಪಿಸಬಹುದಾದ ಎಲ್ಲ ಇತರ ವಿಷಯಗಳು;

(3) ಆಧ್ಯಾದೇಶವನ್ನು ರಚಿಸವಾಗ ಸಿಂಡಿಕೇಟು ಈ ಕೆಳಗಿನವುಗಳೊಂದಿಗೆ ಸಮಾಲೋಚಿಸತಕ್ಕದ್ದು, ಎಂದರೆ:-

(ಎ) ಪರೀಕ್ಷಕರ ನೇಮಕಾತಿ ಮತ್ತು ಕರ್ತವ್ಯಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಅಧ್ಯಯನ ಮಂಡಲಿಗಳು; ಮತ್ತು

(ಬಿ) ಪರೀಕ್ಷಾ ವಿಧಾನ ಅಥವಾ ಗುಣಮಟ್ಟ ಅಥವಾ ವಿದ್ಯಾರ್ಥಿಗಳ ವಸತಿಗಳ ಪರಿಸ್ಥಿತಿಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ವಿದ್ಯಾವಿಷಯಕ ಪರಿಷತ್ತಿನೊಂದಿಗೆ ಸಮಾಲೋಚಿಸತಕ್ಕದ್ದು.

(4) ಸಿಂಡಿಕೇಟು ರಚಿಸಿದ ಪ್ರತಿಯೊಂದು ಅಧ್ಯಾದೇಶವು, ಅದು ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಯಲ್ಲಿ ಬರತಕ್ಕದ್ದು ಮತ್ತು ಹಾಗೆ ರಚಿಸಲಾದ ಪ್ರತಿಯೊಂದು ಅಧ್ಯಾದೇಶವನ್ನು ಕುಲಪತಿಗೆ ಮತ್ತು ಸೆನೆಟಿಗೆ ಮಾಹಿತಿಗಾಗಿ ಕಳುಹಿಸತಕ್ಕದ್ದು.

**36. ನಿಯಮಗಳು.**- (1) ಸಿಂಡಿಕೇಟು, ಅದರ ಅಧಿಕಾರದೊಳಗೆ ಬರುವ ವಿಷಯಗಳ ಸಂಬಂಧದಲ್ಲಿ ಈ ಅಧಿನಿಯಮ, ಶಾಸನಗಳು ಮತ್ತು ಅಧ್ಯಾದೇಶಗಳಿಗೆ ಸುಸಂಗತವಾದ ನಿಯಮಗಳನ್ನು ರಚಿಸಬಹುದು.

(2) ನಿಯಮಗಳು,-

(ಎ) ಬೋಧಕ ಹಾಗೂ ಬೋಧಕೇತರ ಹುದ್ದೆಗಳೆರಡಕ್ಕೂ ಸೂಕ್ತ ನೇಮಕಾತಿ ಪ್ರಕ್ರಿಯೆಗಳನ್ನು ಮಾಡುವ ಬಗ್ಗೆ;

(ಬಿ) ವಿಶ್ವವಿದ್ಯಾಲಯದ ನೌಕರರ ವರ್ತನೆ ಮತ್ತು ದುರ್ವರ್ತನೆ ಪ್ರಕರಣದಲ್ಲಿ ಅನುಸರಿಸಬೇಕಾದ ಶಿಸ್ತುಪಾಲನಾ ವ್ಯವಹರಣೆಗಳು ಮತ್ತು ಅವರ ಕರ್ತವ್ಯಗಳ ನಿರ್ವಹಣೆಯಲ್ಲಿನ ಇತರ ಲೋಪಗಳ ಬಗ್ಗೆ;

(ಸಿ) ಪ್ರತಿಯೊಂದು ಪ್ರಾಧಿಕಾರದ ಸದಸ್ಯರಿಗೆ ಸಭೆಗಳ, ದಿನಾಂಕಗಳ ಮತ್ತು ಆ ಸಭೆಗಳಲ್ಲಿ ನಡೆಸಬೇಕಾದ ಕಾರ್ಯಕಲಾಪದ ನೋಟೀಸನ್ನು ಕೊಡುವ ಬಗ್ಗೆ ಹಾಗೂ ಆ ಸಭೆಗಳ ವ್ಯವಹರಣೆಗಳ ದಾಖಲೆಗಳನ್ನು ಇಡುವುದರ ಬಗ್ಗೆ;

(ಡಿ) ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಬಗ್ಗೆ; ಮತ್ತು

(ಇ) ಅಂಥ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಮತ್ತು ಈ ಅಧಿನಿಯಮ, ಶಾಸನಗಳು, ಅಥವಾ ಅಧ್ಯಾದೇಶಗಳು ಉಪಬಂಧ ಕಲ್ಪಿಸದ ಎಲ್ಲ ವಿಷಯಗಳ ಬಗ್ಗೆ,

- ಉಪಬಂಧ ಕಲ್ಪಿಸಬಹುದು.

(3) ಈ ಪ್ರಕರಣದಡಿ ಮಾಡಲಾದ ಪ್ರತಿಯೊಂದು ನಿಯಮವು, ಸಿಂಡಿಕೇಟು ನಿರ್ದಿಷ್ಟಪಡಿಸಲಾದ ದಿನಾಂಕದಂದು ಜಾರಿಗೆ ಬರತಕ್ಕದ್ದು. ಇದು ಸರ್ಕಾರಿ ರಾಜ್ಯಪತ್ರದಲ್ಲಿಯೂ ಸಹ ಪ್ರಕಟವಾಗತಕ್ಕದ್ದು.

## ಅಧ್ಯಾಯ VI

## ಹಣಕಾಸು ಮತ್ತು ಲೆಕ್ಕಪತ್ರಗಳು

**37. ಸಾಮಾನ್ಯ ನಿಧಿಗಳು.**- ವಿಶ್ವವಿದ್ಯಾಲಯವು ಸಾಮಾನ್ಯ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಇದಕ್ಕೆ,-

(ಎ) ಶುಲ್ಕಗಳು, ದತ್ತಿಗಳು ಮತ್ತು ಅನುದಾನಗಳೇನಾದರೂ ಇದ್ದಲ್ಲಿ ಅವುಗಳಿಂದ ಬಂದ ವರಮಾನವನ್ನು;

(ಬಿ) ವಿಧಿಸಬಹುದಾದಂಥ ಷರತ್ತುಗಳ ಮೇಲೆ ಸರ್ಕಾರದಿಂದ ಪಡೆದುಕೊಂಡ ವಂತಿಗೆಗಳನ್ನು ಅಥವಾ ಅನುದಾನಗಳನ್ನು;

(ಸಿ) ಕೇಂದ್ರ ಸರ್ಕಾರ, ವಿಶ್ವವಿದ್ಯಾಲಯ ಅನುದಾನ ಆಯೋಗ, ವಿಶ್ವ ಆರೋಗ್ಯ ಸಂಸ್ಥೆ, ಯೂನಿಸೆಫ್, ಇತ್ಯಾದಿಗಳಂಥ ಅಂತಾರಾಷ್ಟ್ರೀಯ ದಾನಿ ಏಜೆನ್ಸಿಗಳಿಂದ ಪಡೆದುಕೊಂಡ ಅನುದಾನಗಳನ್ನು,

-ಜಮೆ ಮಾಡತಕ್ಕದ್ದು.

**38.ಇತರನಿಧಿಗಳು.**-ವಿಶ್ವವಿದ್ಯಾಲಯವು ಶಾಸನಗಳ ಮೂಲಕ ವಿಧಾಯಕಗೊಳಿಸಬಹುದಾದಂಥ ಇತರ ನಿಧಿಗಳನ್ನು ಹೊಂದಿರಬಹುದು.

**39. ಸಾಲ ಪಡೆದುಕೊಳ್ಳುವ ಅಧಿಕಾರ.**- ವಿಶ್ವವಿದ್ಯಾಲಯವು ಶಾಸನಗಳ ಮೂಲಕ ವಿಧಾಯಕಗೊಳಿಸಬಹುದಾದ ಯಾವುವೇ ಉದ್ದೇಶಗಳಿಗಾಗಿ, ಬ್ಯಾಂಕು ಅಥವಾ ನಿಗಮದಿಂದ ಹಣವನ್ನು ಸಾಲ ಪಡೆದುಕೊಳ್ಳಬಹುದು. ಸಾಲ ಪಡೆದುಕೊಂಡ ಹಣದ ಒಟ್ಟು ಮೊಬಲಗು ಐದು ಲಕ್ಷ ರೂ. ಗಳನ್ನು ಮೀರುವಲ್ಲಿ, ಅಂಥ ಸಾಲಕ್ಕೆ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದುಕೊಳ್ಳತಕ್ಕದ್ದು.

**1[40. ನಿಧಿಗಳ ನಿರ್ವಹಣೆ.–** ವಿಶ್ವವಿದ್ಯಾಲಯದ ಎಲ್ಲಾ ನಿಧಿಗಳನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ನಿಧಿಗಳ ನಿರ್ವಹಣೆಗೆ ಮತ್ತು ಬಳಕೆಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ನಿರ್ದೇಶನಗಳನ್ನು ಹೊರಡಿಸಬಹುದು. ರಾಜ್ಯ ಸರ್ಕಾರದ ನಿರ್ದೇಶನಗಳು ಅಂತಿಮವಾಗಿರತಕ್ಕದ್ದು.]1

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

**41. ಲೆಕ್ಕ ಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.**- ಸರ್ಕಾರವು ಅವಶ್ಯಕವೆಂದು ಭಾವಿಸಿದಾಗಲೆಲ್ಲಾ ತಾನು ನಿರ್ದೇಶಿಸಬಹುದಾದಂಥ ಲೆಕ್ಕ ಪರಿಶೋಧಕರಿಂದ ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ನಡೆಸುವಂತೆ ಆದೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

**42. ಹಣಕಾಸಿನ ಅಂದಾಜುಗಳು.**- (1) ಉಪ-ಕುಲಪತಿಯು, ನಿಯಮಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು, ಮುಂಬರುವ ವರ್ಷಕ್ಕಾಗಿ ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳನ್ನು ಸಿದ್ಧಪಡಿಸುವಂತೆ ಮತ್ತು ಅದನ್ನು ಅನುಮೋದನೆಗಾಗಿ ಸಿಂಡಿಕೇಟಿನ ಮುಂದೆ ಇಡುವಂತೆ ಮಾಡತಕ್ಕದ್ದು.

(2) ಸಿಂಡಿಕೇಟು ತಾನು ಸೂಕ್ತವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಮಾಡಿ ಹಣಕಾಸು ಅಂದಾಜುಗಳನ್ನು ಅನುಮೋದಿಸಬಹುದು ಮತ್ತು ಸಿಂಡಿಕೇಟು ಅನುಮೋದಿಸಲಾದ ಹಣಕಾಸು ಅಂದಾಜುಗಳಿಗನುಸಾರವಾಗಿ ಹೊರತು ಯಾವ ವೆಚ್ಚವನ್ನೂ ವಹಿಸತಕ್ಕದ್ದಲ್ಲ.

**1[43. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು, ಸಿಂಡಿಕೇಟ್‌ನ ನಿರ್ದೇಶನಗಳ ಮೇರೆಗೆ ಸಿದ್ಧಪಡಿಸತಕ್ಕದ್ದು.

(2) ಹಾಗೆ ತಯಾರಿಸಲಾದ ವಾರ್ಷಿಕ ಲೆಕ್ಕಪತ್ರಗಳನ್ನು ಸೆನೆಟ್ಟು ತನ್ನ ಮುಂದಿನ ಸಭೆಯಲ್ಲೇ ಪರಿಶೀಲಿಸತಕ್ಕದ್ದು. ಸೆನೆಟ್ಟು ಅದಕ್ಕೆ ಸಂಬಂಧಿಸಿದ ನಿರ್ಣಯವನ್ನು

ಅಂಗೀಕರಿಸಬಹುದು ಮತ್ತು ಅದನ್ನು ಸಿಂಡಿಕೇಟ್‌ಗೆ ತಿಳಿಸತಕ್ಕದ್ದು. ಸಿಂಡಿಕೇಟು, ಸೆನೆಟ್ ನೀಡಿದ ಸಲಹೆ ಸೂಚನೆಗಳನ್ನು ಪರಿಗಣಿಸತಕ್ಕದ್ದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ತಾನು ಕೈಗೊಂಡ ಕ್ರಮವನ್ನು ಅಥವಾ ಕ್ರಮವನ್ನು ಕೈಗೊಳ್ಳದಿರುವುದಕ್ಕೆ ಕಾರಣಗಳನ್ನು ತನ್ನ ಮುಂದಿನ ಸಭೆಯಲ್ಲಿ ಸೆನೆಟ್‌ಗೆ ತಿಳಿಸತಕ್ಕದ್ದು.

(3) ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು, ವರ್ಷಕ್ಕೊಮ್ಮೆ, ಏಪ್ರಿಲ್ ತಿಂಗಳಿನಲ್ಲಿ ರಾಜ್ಯ ಲೆಕ್ಕಪತ್ರಗಳ ನಿಯಂತ್ರಕರು ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

(4) ಹಾಗೆ ಲೆಕ್ಕ ಪರಿಶೋಧನೆ ಮಾಡಲಾದ ಲೆಕ್ಕಪತ್ರಗಳನ್ನು ಸಿಂಡಿಕೇಟ್ ಮತ್ತು ಸೆನೆಟ್‌ನ ಮುಂದಿಡತಕ್ಕದ್ದು ಮತ್ತು ಆ ತರುವಾಯ ಸೆನೆಟ್ಟಿನ ನಿರ್ಣಯದೊಂದಿಗೆ ಅಭಿಪ್ರಾಯಗಳನ್ನು ಪ್ರತೀ ವರ್ಷದ ಸೆಪ್ಟಂಬರ್ 30ರೊಳಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು, ತನ್ನ ಮುಂದಿನ ನಿಕಟ ಅಧಿವೇಶನದಲ್ಲಿ ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಮುಂದೆ ಅದನ್ನು ಮಂಡಿಸತಕ್ಕದ್ದು.]**1**

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

**44. ವಾರ್ಷಿಕ ವರದಿ.–** (1) ಸಿಂಡಿಕೇಟು ಪ್ರತಿಯೊಂದು ಹಣಕಾಸು ವರ್ಷಕ್ಕೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಶಾಸನಗಳ ಮೂಲಕ ನಿಯಮಿಸಬಹುದಾದಂಥ ದಿನಾಂಕಗಳಂದು ಅಥವಾ ಅದಕ್ಕೆ ಮೊದಲು ಸೆನೆಟಗೆ ಒಪ್ಪಿಸತಕ್ಕದ್ದು. ಸೆನೆಟು ಅವುಗಳ ಮೇಲೆ ನಿರ್ಣಯಗಳನ್ನು ಹೊರಡಿಸಬಹುದು ಮತ್ತು ಸಿಂಡಿಕೇಟು ಅದಕ್ಕನುಸಾರವಾಗಿ ಕೈಗೊಳ್ಳಲಾದ ಕ್ರಮವನ್ನು ಸೆನೆಟಿಗೆ ತಿಳಿಸತಕ್ಕದ್ದು.

1[(2) ವಾರ್ಷಿಕ ವರದಿ ಮೇಲೆ ಸೆನೆಟ್ ಮಾಡಿರುವ ನಿರ್ಣಯದ ಜೊತೆಗೆ ವಾರ್ಷಿಕ ವರದಿಯ ಪ್ರತಿಗಳನ್ನು, ಪ್ರತಿವರ್ಷದ ಸೆಪ್ಟಂಬರ್ 30ರೊಳಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ತನ್ನ ಮುಂದಿನ ನಿಕಟ ಅಧಿವೇಶನದಲ್ಲಿ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಅದನ್ನು ಮಂಡಿಸತಕ್ಕದ್ದು.]1

1. 2014ರ ಅಧಿನಿಯಮ ಸಂಖ್ಯೆ 1 ಮೂಲಕ ದಿನಾಂಕ: 01.01.2014ರಿಂದ ಪ್ರತಿಯೋಜಿಸಲಾಗಿದೆ.

## ಅಧ್ಯಾಯ VII

## ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳ ಮಾನ್ಯತೆ

**45. ಕಾಲೇಜುಗಳ ಸಂಯೋಜನೆ.–** (1) ವಿಶ್ವವಿದ್ಯಾಲಯದ ಪ್ರದೇಶದೊಳಗೆ ಬರುವ ಕಾಲೇಜುಗಳನ್ನು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳನ್ನು ಪೂರೈಸಿದ ಮೇಲೆ, ರಾಜ್ಯ ಸರ್ಕಾರವು ಮಾಡಿದ ಶಿಫಾರಸುಗಳ ಮೇಲೆ ವಿಶ್ವವಿದ್ಯಾಲಯದಿಂದ ಸಂಯೋಜಿತಗೊಂಡ ಕಾಲೇಜುಗಳೆಂಬುದಾಗಿ ವಿಶ್ವವಿದ್ಯಾಲಯಕ್ಕೆ ಸಂಯೋಜನೆ–

ಗೊಳಿಸಬಹುದು.

(2) ವಿಶ್ವವಿದ್ಯಾಲಯಕ್ಕೆ ಸಂಯೋಜನೆಗಾಗಿ ಅರ್ಜಿಯನ್ನು ಸಲ್ಲಿಸುವ ಕಾಲೇಜು, ಅಧ್ಯಾದೇಶಗಳಿಂದ ನಿಗದಿಪಡಿಸಲಾದ ಸಮಯಾವಕಾಶದೊಳಗೆ ರಿಜಿಸ್ಟ್ರಾರರಿಗೆ ಅರ್ಜಿಯನ್ನು ಕಳಿಸತಕ್ಕದ್ದು ಮತ್ತು ಸಿಂಡಿಕೇಟು ಮತ್ತು ವಿದ್ಯಾವಿಷಯಕ ಪರಿಷತ್ತಿಗೆ,-

(ಎ) ಆ ಕಾಲೇಜು ನೀಡಲು ಉದ್ದೇಶಿಸಿದ ಶಿಕ್ಷಣದ ಮಾದರಿಯನ್ನು, ನೆರೆಹೊರೆಯಲ್ಲಿರುವ ಕಾಲೇಜುಗಳಲ್ಲಿ ಈಗಿರುವ ಏರ್ಪಾಟು ಮತ್ತು ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಸ್ಥಳದ ಸೂಕ್ತತೆಯನ್ನು ಗಮನದಲ್ಲಿಟ್ಟುಕೊಂಡು, ಆ ಕಾಲೇಜು ಸ್ಥಳೀಯ ಅವಶ್ಯಕತೆಯನ್ನು ಪೂರೈಸುತ್ತದೆಯೆಂದು;

(ಬಿ) ಅದು ಕ್ರಮಬದ್ಧವಾಗಿ ರಚಿಸಲಾದ ಆಡಳಿತ ಮಂಡಲಿಯ ನಿರ್ವಹಣೆಗೆ ಒಳಪಟ್ಟಿರಬೇಕೆಂದು;

(ಸಿ) ಬೋಧನಾ ಸಿಬ್ಬಂದಿಯ ಸಂಖ್ಯೆ ಹಾಗೂ ವಿದ್ಯಾರ್ಹತೆಗಳು ಮತ್ತು ಅವರ ಪದಾವಧಿಯನ್ನು ಪರಿಪಾಲಿಸುವ ಷರತ್ತುಗಳು, ಆ ಕಾಲೇಜಿನಲ್ಲಿ ಕೈಗೊಳ್ಳಬೇಕಾದ ಶಿಕ್ಷಣ ವ್ಯಾಸಂಗ ಕ್ರಮಗಳು, ಬೋಧನೆ ಅಥವಾ ತರಬೇತಿಗೆ ಸೂಕ್ತ ಅವಕಾಶವನ್ನು ಕಲ್ಪಿಸುವಂತಿದೆಯೆಂದು;

(ಡಿ) ಯಾವ ಕಟ್ಟಡದಲ್ಲಿ ಆ ಕಾಲೇಜು ಇರಬೇಕಾಗಿದೆಯೋ ಆ ಕಟ್ಟಡ ಸೂಕ್ತವಾಗಿದೆಯೆಂದು ಮತ್ತು ತಂದೆ-ತಾಯಿಗಳೊಂದಿಗೆ ಅಥವಾ ಪಾಲಕರೊಡನೆ ವಾಸಿಸದ ವಿದ್ಯಾರ್ಥಿಗಳಿಗಾಗಿ ಆ ಕಾಲೇಜಿನಲ್ಲಿ ಅಥವಾ ಆ ಕಾಲೇಜು ಅನುಮೋದಿಸುವ ವಸತಿ ಗೃಹದ ನಿವಾಸಕ್ಕಾಗಿ ಮತ್ತು ವಿದ್ಯಾರ್ಥಿಗಳ ಮೇಲ್ವಿಚಾರಣೆ ಹಾಗೂ ಕಲ್ಯಾಣಕ್ಕಾಗಿ ಆಧ್ಯಾದೇಶಗಳಿಗನುಗುಣವಾಗಿ ಏರ್ಪಾಟನ್ನು ಮಾಡಲಾಗುವುದೆಂದು;

(ಇ) ಗ್ರಂಥಾಲಯಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ ಅಥವಾ ಮಾಡಲಾಗುವುದೆಂದು;

(ಎಫ್) ಪ್ರಾಯೋಗಿಕ ವಿಜ್ಞಾನದ ಯಾವುದೇ ಶಾಖೆಗಾಗಿ ಸಂಯೋಜನೆಯನ್ನು ಹೊಂದಿರುವಲ್ಲಿ, ಸೂಕ್ತ ರೀತಿಯಲ್ಲಿ ಸಜ್ಜುಗೊಳಿಸಲಾದ ಪ್ರಯೋಗಶಾಲೆ ಅಥವಾ ವಸ್ತು ಸಂಗ್ರಹಾಲಯದಲ್ಲಿ, ವಿಜ್ಞಾನದ ಆ ಶಾಖೆಯಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಶಾಸನಗಳ, ಆಧ್ಯಾದೇಶಗಳ ಮತ್ತು ನಿಯಮಗಳಿಗನುಸಾರವಾಗಿ ವ್ಯವಸ್ಥೆಗಳನ್ನು ಮಾಡಲಾಗಿದೆಯೆಂದು ಅಥವಾ ಮಾಡಲಾಗುವುದೆಂದು;

(ಜಿ) ಪ್ರಾಂಶುಪಾಲರು ಮತ್ತು ಬೋಧಕ ಸಿಬ್ಬಂದಿ ಸದಸ್ಯರ ನಿವಾಸಕ್ಕಾಗಿ ಕಾಲೇಜಿನಲ್ಲಿ ಅಥವಾ ವಿದ್ಯಾರ್ಥಿಗಳ ನಿವಾಸಕ್ಕಾಗಿ ಒದಗಿಸಲಾದ ಸ್ಥಳದಲ್ಲಿ ಅಥವಾ ಅದರ ಹತ್ತಿರ, ಸಂದರ್ಭಗಳು ಅನುಮತಿಸುವಷ್ಟರಮಟ್ಟಿಗೆ ಸೂಕ್ತ ಏರ್ಪಾಟನ್ನು ಮಾಡಲಾಗುವುದೆಂದು;

(ಹೆಚ್) ಆ ಕಾಲೇಜಿನ ಹಣಕಾಸಿನ ಸಂಪನ್ಮೂಲಗಳು, ಅದರ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯನಿರ್ವಹಣೆಗೆ ಸೂಕ್ತ ಏರ್ಪಾಟನ್ನು ಮಾಡಲು ತಕ್ಕಷ್ಟಿವೆಯೆಂದು; ಮತ್ತು

(ಐ) ವಿದ್ಯಾರ್ಥಿಗಳು ಸಂದಾಯ ಮಾಡಬೇಕಾದ ಶುಲ್ಕಗಳೇನಾದರೂ ಇದ್ದಲ್ಲಿ, ಅವುಗಳನ್ನು ನಿಗದಿಪಡಿಸುವ ನಿಯಮಗಳನ್ನು ರೂಪಿಸಲಾಗಿದೆಯೆಂದು ಅಥವಾ ರೂಪಿಸಲಾಗುವುದೆಂದು,

-ಮನದಟ್ಟುಮಾಡಿಕೊಡತಕ್ಕದ್ದು.

(3) ಕಾಲೇಜು ಸಂಯೋಜನೆಗೊಂಡ ತರುವಾಯ, ಆಡಳಿತ ವರ್ಗದಲ್ಲಿನ ಯಾವುದೇ ವರ್ಗಾವಣೆ ಮತ್ತು ಬೋಧಕ ಸಿಬ್ಬಂದಿಯಲ್ಲಿನ ಎಲ್ಲ ಬದಲಾವಣೆಗಳನ್ನು ಮತ್ತು ಈ ಹಿಂದೆ ಹೇಳಿದ ಯಾವುವೇ ಅಗತ್ಯತೆಗಳನ್ನು ಪೂರೈಸದಿರುವಲ್ಲಿ ಅಥವಾ ಪೂರೈಸುತ್ತಿರುವುದು ಮುಂದುವರಿಯುತ್ತಿರುವಲ್ಲಿ ಕೊನೆಗೊಳ್ಳುವ ಎಲ್ಲ ಇತರ ಬದಲಾವಣೆಗಳನ್ನು ಸಿಂಡಿಕೇಟಿಗೆ ಮತ್ತು ಸರ್ಕಾರಕ್ಕೆ ಅಥವಾ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಾಧಿಕಾರಕ್ಕೆ ಕೂಡಲೇ ವರದಿ ಮಾಡುವ ಭರವಸೆಯನ್ನೂ ಸಹ ಅರ್ಜಿಯು ಒಳಗೊಂಡಿರತಕ್ಕದ್ದು.

(4) (2)ನೇ ಉಪ-ಪ್ರಕರಣದಡಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಸಿಂಡಿಕೇಟು,-

(ಎ) ಅವಶ್ಯಕ ಹಾಗೂ ಸುಸಂಗತವೆಂದು ಭಾವಿಸಬಹುದಾದಂಥ ವಿಷಯಗಳಿಗೆ ಸಂಬಂಧಿಸಿದಂತೆ ಈ ಪರವಾಗಿ ಸಿಂಡಿಕೇಟಿನಿಂದ ಅಧಿಕೃತನಾದ ಸಕ್ಷಮ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಸ್ಥಳೀಯ ವಿಚಾರಣೆ ನಡೆಸಬೇಕೆಂದು ನಿರ್ದೇಶಿಸತಕ್ಕದ್ದು;

(ಬಿ) ಅದಕ್ಕೆ ಅವಶ್ಯಕವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು; ಮತ್ತು

(ಸಿ) (ಎ) ಮತ್ತು (ಬಿ) ಖಂಡಗಳಡಿಯ ಯಾವುದೇ ವಿಚಾರಣೆಯ ಫಲಿತಾಂಶವನ್ನು ನಿರೂಪಿಸಿ, ಅರ್ಜಿಯನ್ನು ಸಂಪೂರ್ಣವಾಗಿಯೇ ಆಗಲಿ ಅಥವಾ ಭಾಗಶಃವಾಗಿಯೇ ಆಗಲಿ ಮಂಜೂರು ಮಾಡಬೇಕೆ ಅಥವಾ ತಿರಸ್ಕರಿಸಬೇಕೆ ಎಂಬ ಪ್ರಶ್ನೆಯ ಮೇಲೆ ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚಿಸಿದ ತರುವಾಯ ತನ್ನ ಅಭಿಪ್ರಾಯಗಳನ್ನು ದಾಖಲುಮಾಡತಕ್ಕದ್ದು.

(5) ರಿಜಿಸ್ಟ್ರಾರನು ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಅರ್ಜಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿದ್ಯಾ ವಿಷಯಕ ಪರಿಷತ್ತು ಮತ್ತು ಸಿಂಡಿಕೇಟನ ವ್ಯವಹರಣೆಗಳೇನಾದರೂ ಇದ್ದಲ್ಲಿ ಅವುಗಳೆಲ್ಲವನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅದು ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಜೂರು ಮಾಡುವುದಕ್ಕೆ ಶಿಫಾರಸು ಮಾಡತಕ್ಕದ್ದು ಅಥವಾ ಅರ್ಜಿಯನ್ನು ಅಥವಾ ಅದರ ಭಾಗವನ್ನು ತಿರಸ್ಕರಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ವಿಶ್ವವಿದ್ಯಾಲಯವು ಆದೇಶಗಳನ್ನು ಹೊರಡಿಸತಕ್ಕದ್ದು.

(6) ಅರ್ಜಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಮಂಜೂರಾತಿ ನೀಡಿರುವಲ್ಲಿ, ಕಾಲೇಜು, ಯಾವ ಶಿಕ್ಷಣದ ವ್ಯಾಸಂಗ ಕ್ರಮಗಳ ಸಂಬಂಧದಲ್ಲಿ ಮತ್ತು ಯಾವ ಅವಧಿಗಾಗಿ ಸಂಯೋಜನೆಗೊಂಡಿದೆಯೋ, ವಿಶ್ವವಿದ್ಯಾಲಯದ ಆದೇಶವು ಅವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಸರ್ಕಾರವು ಅಥವಾ ವಿಶ್ವವಿದ್ಯಾಲಯವು ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ತಿರಸ್ಕರಿಸಿರುವಲ್ಲಿ, ಆ ಬಗ್ಗೆ ಕಾರಣಗಳನ್ನು ತಿಳಿಸತಕ್ಕದ್ದು:

ಪರಂತು, ಸರ್ಕಾರದ ಶಿಫಾರಸಿನ ಮೇಲೆ, ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಯೋಜನೆಗೊಂಡಿರುವ ಮತ್ತು ಸಂಯೋಜನೆಯ ಎಲ್ಲ ಷರತ್ತುಗಳನ್ನು ಪೂರೈಸಿರುವ ಮತ್ತು ಕಾಲಕಾಲಕ್ಕೆ ವಿದ್ಯಾವಿಷಯಕ ಮತ್ತು ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜಿಗೆ ಸರ್ಕಾರದ ಶಿಫಾರಸಿನ ಮೇಲೆ ಖಾಯಂ ಸಂಯೋಜನೆಯನ್ನು ಮಂಜೂರು ಮಾಡಬಹುದು.

(7) ಸರ್ಕಾರವು ಅಥವಾ ವಿಶ್ವವಿದ್ಯಾಲಯವು ತನ್ನ ಆದೇಶವನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಿಜಿಸ್ಟ್ರಾರನು, ಅರ್ಜಿಯ ಬಗ್ಗೆ, (4) ಮತ್ತು (6) ನೇ ಉಪ-ಪ್ರಕರಣಗಳಡಿ ಇದರ ಮೇಲೆ ಕೈಗೊಂಡ ಕ್ರಮ ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ವ್ಯವಹರಣೆಗಳ ಬಗ್ಗೆ ಸಂಪೂರ್ಣ ವರದಿಯನ್ನು ಸೆನಟಿಗೆ ಒಪ್ಪಿಸತಕ್ಕದ್ದು.

(8) (1)ನೇ ಉಪ-ಪ್ರಕರಣದಡಿಯ ಅರ್ಜಿಯನ್ನು (5)ನೇ ಉಪ-ಪ್ರಕರಣದಡಿ ಆದೇಶವನ್ನು ಮಾಡುವುದಕ್ಕೆ ಮೊದಲಿನ ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳಬಹುದು.

(9) ಯಾವ ಶಿಕ್ಷಣದ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಕಾಲೇಜು ಸಂಯೋಜನೆಗೊಂಡಿದೆಯೋ ಆ ವ್ಯಾಸಂಗ ಕ್ರಮಗಳಿಗೆ ಇನ್ನಷ್ಟು ವ್ಯಾಸಂಗ ಕ್ರಮಗಳನ್ನು ಸೇರಿಸಲು ಅಪೇಕ್ಷಿಸಿದಲ್ಲಿ, (2)ರಿಂದ (8)ನೇ ಉಪ-ಪ್ರಕರಣಗಳಲ್ಲಿ ನಿಯಮಿಸಲಾದ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಮಟ್ಟಿಗೆ, ಅನುಸರಿಸತಕ್ಕದ್ದು.

(10)(ಎ) ವಿಶ್ವವಿದ್ಯಾಲಯಕ್ಕೆ ಸಂಯೋಜನೆಯನ್ನು ಕೋರುವ ಯಾವುದೇ ಹೊಸ ಕಾಲೇಜು ಅಥವಾ ಅಂಥ ವ್ಯಾಸಂಗ ಕ್ರಮಗಳಿಗೆ ಹೊಸ ವ್ಯಾಸಂಗ ಕ್ರಮಗಳನ್ನು ಸೇರಿಸಲು ಸಂಯೋಜನೆಯನ್ನು ಕೋರುವ ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜು, ಅಂಥ ಹೊಸ ಕಾಲೇಜಿಗೆ ಅಥವಾ ಸಂದರ್ಭಾನುಸಾರವಾಗಿ ಅಂಥ

ವ್ಯಾಸಂಗ ಕ್ರಮಕ್ಕೆ ಸಂಬಂಧಪಟ್ಟಂತೆ ಆಸ್ತಿತ್ವದಲ್ಲಿರುವ ಕಾಲೇಜಿಗೆ ಸಂಯೋಜನೆಯನ್ನು ಮಂಜೂರು ಮಾಡಿದ ಹೊರತು, ವಿದ್ಯಾರ್ಥಿಗಳಿಗೆ ಪ್ರವೇಶ ನೀಡತಕ್ಕದ್ದಲ್ಲ;

(ಬಿ) ಒಂದು ಅಧ್ಯಯನ ವ್ಯಾಸಂಗ ಕ್ರಮಕ್ಕೆ ಸೇರಿಸಿಕೊಳ್ಳಬೇಕಾದ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆಯು, ವಿಶ್ವವಿದ್ಯಾಲಯ ಅಥವಾ ಸರ್ಕಾರವು ಹಾಗೆ ಸೇರಿಸಿಕೊಳ್ಳಲು ನಿಗದಿಪಡಿಸಲಾದ ಸಂಖ್ಯೆಯನ್ನು ಮೀರತಕ್ಕದ್ದಲ್ಲ ಮತ್ತು ಸೇರಿಸಿಕೊಳ್ಳಬೇಕಾದ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಮಾಡಿಕೊಂಡ ಯಾವುದೇ ಪ್ರವೇಶವು ಅನೂರ್ಜಿತವಾಗತಕ್ಕದ್ದು;

(ಸಿ) (ಬಿ) ಖಂಡದಡಿ ಯಾವ ವಿದ್ಯಾರ್ಥಿಯ ಪ್ರವೇಶವು ಅನೂರ್ಜಿತವಾಗಿದೆಯೋ ಆ ಯಾರೇ ವಿದ್ಯಾರ್ಥಿಯು ವಿಶ್ವವಿದ್ಯಾಲಯವು ನಡೆಸುವ ಯಾವುದೇ ಪರೀಕ್ಷೆಗೆ ಹಾಜರಾಗಲು ಅರ್ಹನಾಗಿರತಕ್ಕದ್ದಲ್ಲ ಅಥವಾ ಕಾಲೇಜು ಅವನಿಗೆ ಪರೀಕ್ಷೆಗೆ ಹಾಜರಾಗಲು ಅನುಮತಿಸತಕ್ಕದ್ದಲ್ಲ.

**46. ಕೆಲವು ಸಂಸ್ಥೆಗಳಿಗೆ ಮಾನ್ಯತೆ.-** (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ನಡೆಸುವ ಕಾಲೇಜುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು, ಶಾಸನಗಳ ಮೂಲಕ ನಿಯಮಿಸಬಹುದಾದಂಥ

ಉದ್ದೇಶಕ್ಕಾಗಿ ಮತ್ತು ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಮಾನ್ಯತೆ ಪಡೆದ ಸಂಸ್ಥೆಯೆಂದು ಸಿಂಡಿಕೇಟು ಮಾನ್ಯತೆ ನೀಡಬಹುದು.

(2) ಯಾವುದೇ ಅಂಥ ಮಾನ್ಯತೆಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಕಾರಣಗಳಿಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

**47. ಕಾಲೇಜುಗಳ ಪರೀವೀಕ್ಷಣೆ ಮತ್ತು ವರದಿಗಳು.-** (1) ಸಂಯೋಜನೆಗೊಂಡ ಪ್ರತಿಯೊಂದು ಕಾಲೇಜು, ವಿದ್ಯಾವಿಷಯಕ ಪರಿಷತ್ತಿನೊಡನೆ ಸಿಂಡಿಕೇಟು ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ಅಥವಾ ಸಂಸ್ಥೆಯ ದಕ್ಷತೆಯನ್ನು ನಿರ್ಣಯಿಸುವುದಕ್ಕೆ ಸಾಧ್ಯವಾಗುವಂತೆ ಅಗತ್ಯಪಡಿಸಬಹುದಾದಂಥ ವರದಿಗಳನ್ನು, ವಿವರಣ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ರಿಜಿಸ್ಟ್ರಾರನಿಗೆ ಒದಗಿಸತಕ್ಕದ್ದು.

(2) ಸಿಂಡಿಕೇಟು, ಅಂಥ ಪ್ರತಿಯೊಂದು ಕಾಲೇಜು ಈ ಬಗ್ಗೆ ತನ್ನಿಂದ ಅಧಿಕೃತನಾದ ಒಬ್ಬ ಅಥವಾ ಹೆಚ್ಚು ಸಕ್ಷಮ ವ್ಯಕ್ತಿಗಳಿಂದ ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಸಿಂಡಿಕೇಟು, ಹಾಗೆ ಪರಿವೀಕ್ಷಣೆ ನಡೆಸಿದ ಮೇಲೆ ಯಾವುದೇ ಕಾಲೇಜನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ, 45ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುವೇ ವಿಷಯಗಳ ಸಂಬಂಧದಲ್ಲಿ ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ಕ್ರಮವನ್ನು ಕೈಗೊಳ್ಳಲು ಕೋರಬಹುದು.

**48. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.-** (1) 45ನೇ ಪ್ರಕರಣದ (2)ನೇ ಉಪ-ಪ್ರಕರಣದ ಯಾವುವೇ ಉಪಬಂಧಗಳನ್ನು ಪಾಲಿಸಲು ಕಾಲೇಜು ತಪ್ಪಿದರೆ ಅಥವಾ ಕಾಲೇಜು ತನ್ನ ಸಂಯೋಜನೆಯ ಯಾವುವೇ ಷರತ್ತುಗಳನ್ನು ಪಾಲಿಸಲು ತಪ್ಪಿದರೆ ಅಥವಾ ಶಿಕ್ಷಣದ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ಕಾಲೇಜನ್ನು ನಡೆಸಿಕೊಂಡು ಬರುತ್ತಿದ್ದರೆ ಸಂಯೋಜನೆಯ ಮೂಲಕ ಕಾಲೇಜಿಗೆ ಪ್ರದತ್ತವಾದ ಹಕ್ಕುಗಳನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ಅಂಥ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮಾರ್ಪಾಡು ಮಾಡುವುದಕ್ಕೆ ಸಿಂಡಿಕೇಟನಲ್ಲಿ ಮಾತ್ರ ಪ್ರಸ್ತಾವವನ್ನು ಪ್ರಾರಂಭಿಸತಕ್ಕದ್ದು. ಅಂಥ ಪ್ರಸ್ತಾವವನ್ನು ಮಂಡಿಸಲು ಉದ್ದೇಶಿಸಿರುವ ಸಿಂಡಿಕೇಟಿನ ಸದಸ್ಯನು ಆ ಬಗ್ಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಯಾವ ಆಧಾರಗಳ ಮೇಲೆ ಅದನ್ನು ಮಾಡಲಾಗಿದೆಯೋ ಆ ಆಧಾರಗಳನ್ನು ಬರಹದಲ್ಲಿ ತಿಳಿಸತಕ್ಕದ್ದು.

(3) ಸದರಿ ಪ್ರಸ್ತಾವವನ್ನು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಸಿಂಡಿಕೇಟು ನೋಟೀಸಿನ ಒಂದು ಪ್ರತಿಯನ್ನು ಮತ್ತು (2)ನೇ ಉಪಪ್ರಕರಣದಲ್ಲಿ ತಿಳಿಸಲಾದ ಬರಹ ರೂಪದ ಹೇಳಿಕೆಯನ್ನು, ಕಾಲೇಜಿನ ಪರವಾಗಿ ತಿಳಿವಳಿಕೆಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಕಾಲೇಜಿನ ಪರವಾಗಿ ಸಲ್ಲಿಸಲಾಗುವ ಯಾವುದೇ ಮನವಿಯನ್ನು ಸಿಂಡಿಕೇಟು ಪರಿಶೀಲಿಸುತ್ತದೆಯೆಂಬ ತಿಳಿವಳಿಕೆ ಪತ್ರದೊಂದಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸತಕ್ಕದ್ದು:

ಪರಂತು ಹಾಗೆ ನಿರ್ದಿಷ್ಟಪಡಿಸಲಾದ ಅವಧಿಯನ್ನು ಅವಶ್ಯಕವಿದ್ದರೆ ಸಿಂಡಿಕೇಟು ವಿಸ್ತರಿಸಬಹುದು.

(4) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಕ್ತಾಯವಾದ ಮೇಲೆ ಸಿಂಡಿಕೇಟು ಪ್ರಸ್ತಾವದ ನೋಟೀಸು, ಹೇಳಿಕೆ ಮತ್ತು ಮನವಿಯನ್ನು ಪರಶೀಲಿಸಿದ ತರುವಾಯ ಮತ್ತು ಈ ಬಗ್ಗೆ ಅಧಿಕೃತಗೊಳಿಸಲಾದ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಅಂಥ ಪರಿವೀಕ್ಷಣೆಯನ್ನು ಮತ್ತು ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ವಿದ್ಯಾವಿಷಯಕ ಪರಿಷತ್ತಿನೊಡನೆ ಸಮಾಲೋಚಿಸಿದ ತರುವಾಯ ಸೆನೆಟಗೆ ವರದಿಯನ್ನು ಸಲ್ಲಿಸತಕ್ಕದ್ದು.

(5) (4)ನೇ ಉಪ-ಪ್ರಕರಣದಡಿಯ ವರದಿಯನ್ನು ಸ್ವೀಕರಿಸಿದ ಮೇಲೆ ಸೆನೆಟು ತನಗೆ ಅವಶ್ಯಕವೆಂದು ಕಂಡುಬರಹುದಾದಂಥ ಹೆಚ್ಚಿನ ವಿಚಾರಣೆಯೇನಾದರೂ ಇದ್ದಲ್ಲಿ ಅದನ್ನು ನಡೆಸಿದ ತರುವಾಯ ವಿಷಯದ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲುಮಾಡತಕ್ಕದ್ದು:

ಪರಂತು, ಸಂಯೋಜನೆಯ ಹಿಂತೆಗೆದುಕೊಳ್ಳುವಿಕೆಯನ್ನು ಶಿಫಾರಸು ಮಾಡುವ ಸೆನೆಟಿನ ಯಾವ ನಿರ್ಣಯವೂ ಸೆನೆಟಿನ ಸಭೆಯಲ್ಲಿ ಹಾಜರಿದ್ದ ಸದಸ್ಯರಲ್ಲಿ ಮೂರನೇ ಎರಡರಷ್ಟು ಸದಸ್ಯರ ಬೆಂಬಲವನ್ನು ಪಡೆದಿರುವ ಹೊರತು ಮತ್ತು ಅಂಥ ಬಹುಮತವು ಸೆನೆಟನ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ಅರ್ಧದಷ್ಟಕ್ಕೆ ಕಡಿಮೆ ಇಲ್ಲದಂತೆ ಇದ್ದಹೊರತು, ಅದರಿಂದ ಅನುಮೋದಿತವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(6) ರಿಜಿಸ್ಟ್ರಾರನು, ಪ್ರಸ್ತಾವವನ್ನು ಮತ್ತು ಅದಕ್ಕೆ ಸಂಬಂಧಿಸಿದ ವಿದ್ಯಾವಿಷಯಕ ಪರಿಷತ್ತು, ಸಿಂಡಿಕೇಟು ಮತ್ತು ಸೆನೆಟಿನ ವ್ಯವಹರಣೆಗಳೇನಾದರೂ ಇದ್ದಲ್ಲಿ ಅವುಗಳೆಲ್ಲವನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಸರ್ಕಾರವು ತನಗೆ ಅವಶ್ಯಕವೆಂದು ಕಂಡುಬರಬಹುದಾದಂಥ ವಿಚಾರಣೆಯೇನಾದರೂ ಇದ್ದಲ್ಲಿ ಅದನ್ನು ನಡೆಸಿದ ತರುವಾಯ ವಿಶ್ವವಿದ್ಯಾಲಯಕ್ಕೆ ತಮ್ಮ ಶಿಫಾರಸುಗಳನ್ನು ಮಾಡತಕ್ಕದ್ದು ಮತ್ತು ಆ ತರುವಾಯ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು.

(7) (6)ನೇ ಉಪ-ಪ್ರಕರಣದಡಿಯ ಆದೇಶದಿಂದ ಸಂಯೋಜನೆಯ ಮೂಲಕ ಪ್ರದತ್ತವಾದ ಹಕ್ಕುಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಹಿಂತೆಗೆದುಕೊಂಡಿರುವಲ್ಲಿ ಅಥವಾ ಮಾರ್ಪಾಟು ಮಾಡಿರುವಲ್ಲಿ, ಅಂಥ ಹಿಂತೆಗೆದುಕೊಳ್ಳುವಿಕೆ ಅಥವಾ ಮಾರ್ಪಾಟಿಗೆ ಕಾರಣಗಳನ್ನು ಆದೇಶದಲ್ಲಿ ತಿಳಿಸತಕ್ಕದ್ದು.

## ಅಧ್ಯಾಯ VIII

## ವಿಶ್ವವಿದ್ಯಾಲಯದ ಅಧ್ಯಾಪಕರ ಮತ್ತು ಇತರ ನೌಕರರ ನೇಮಕಾತಿ

**49. ಅಧ್ಯಾಪಕರು ಮೊದಲಾದವರ ನೇಮಕಾತಿ.**- (1) ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು, ಗ್ರಂಥಪಾಲಕ, ರೀಡರುಗಳು ಮತ್ತು ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳನ್ನು ಆಯ್ಕೆಮಾಡುವುದಕ್ಕಾಗಿ ನೇಮಕಾತಿ ಮಂಡಲಿ ಇರತಕ್ಕದ್ದು.

(2) ಅಂಥ ಪ್ರತಿಯೊಂದು ಮಂಡಲಿಯು,-

(ಎ) ಪ್ರಾಧ್ಯಾಪಕರ ಮತ್ತು ರೀಡರುಗಳ ಹುದ್ದೆಗಳ ಮತ್ತು ಗ್ರಂಥಪಾಲಕ ಹುದ್ದೆಗಳಿಗೆ ಆಯ್ಕೆಮಾಡಲು,-

(i) ಉಪ-ಕುಲಪತಿ-ಪದನಿಮಿತ್ತ ಅಧ್ಯಕ್ಷ;

(ii)ಪ್ರಾಧ್ಯಾಪಕನಾಗಿದ್ದರೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷ ಮತ್ತು ಪ್ರಾಧ್ಯಾಪಕನಾಗಿರದಿದ್ದರೆ ಕುಲಪತಿಯು ಸರ್ಕಾರದೊಡನೆ ಸಮಾಲೋಚನೆ ನಡೆಸಿ ನಾಮನಿರ್ದೇಶಿಸಿದ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕ ಮತ್ತು ರಾಜ್ಯದ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಂತ ಪ್ರಾಧ್ಯಾಪಕನು ಲಭ್ಯವಾಗದೇ ಇದ್ದರೆ, ರಾಜ್ಯದಲ್ಲಿನ ಕೇಂದ್ರ ಸಂಸ್ಥೆಯಿಂದ ಅಥವಾ ಇತರ ಯಾವುದೇ ರಾಜ್ಯದ ವಿಶ್ವವಿದ್ಯಾಲಯದಿಂದ ಕುಲಪತಿಯು ನಾಮನಿರ್ದೇಶಿಸಿದ ಸಂಬಂಧಪಟ್ಟ ವಿಭಾಗದ ಪ್ರಾಧ್ಯಾಪಕ;

(iii) ಕುಲಪತಿಯು ಸರ್ಕಾರದೊಡನೆ ಸಮಾಲೋಚನೆ ನಡೆಸಿ ನಾಮನಿರ್ದೇಶಿಸಿದ ನಾಲ್ವರು ತಜ್ಞರ ಪೈಕಿ ವಿಶ್ವವಿದ್ಯಾಲಯ ಅನುದಾನ ಆಯೋಗವು ಒದಗಿಸಿದ ಪಟ್ಟಿಯಿಂದ ಇಬ್ಬರು ಮತ್ತು ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಇತರ ಸಂಸ್ಥೆಯಲ್ಲಿ ಸೇವೆಸಲ್ಲಿಸುತ್ತಿರುವ ವ್ಯಕ್ತಿಗಳಲ್ಲಿ ಇಬ್ಬರು;

(ಬಿ) ಉಪನ್ಯಾಸಕರ ಹುದ್ದೆಗಳಿಗೆ ಆಯ್ಕೆಮಾಡಲು,-

(i) ಉಪ-ಕುಲಪತಿ-ಪದನಿಮಿತ್ತ ಅಧ್ಯಕ್ಷ;

(ii) ಕುಲಪತಿಯು ನಾಮನಿರ್ದೇಶಿಸಿದ ಇಬ್ಬರು ತಜ್ಞರು;

(iii) ಪ್ರಾಧ್ಯಾಪಕನಾಗಿದ್ದರೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷ ಮತ್ತು ಪ್ರಾಧ್ಯಾಪಕನಾಗಿರದಿದ್ದರೆ ಕುಲಪತಿಯು ಸರ್ಕಾರದೊಡನೆ ಸಮಾಲೋಚನೆ ನಡೆಸಿ ನಾಮನಿರ್ದೇಶಿಸಿದ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾಲಯದ ಸಂಬಂಧಪಟ್ಟ ವಿಭಾಗದ ಒಬ್ಬ ಪ್ರಾಧ್ಯಾಪಕ ಮತ್ತು ರಾಜ್ಯದೊಳಗಿನ ಯಾವುದೇ ವಿಶ್ವವಿದ್ಯಾಲಯದಲ್ಲಿ ಅಂಥ ಪ್ರಾಧ್ಯಾಪಕನು ಲಭ್ಯವಾಗದೆ ಇದ್ದರೆ ರಾಜ್ಯದೊಳಗಿನ ಕೇಂದ್ರ ಸಂಸ್ಥೆಯಿಂದ ಅಥವಾ ಇತರ ಯಾವುದೇ ರಾಜ್ಯದ ವಿಶ್ವವಿದ್ಯಾಲಯದಿಂದ ಕುಲಪತಿಯು ನಾಮನಿರ್ದೇಶಿಸಿದಂಥ ಸಂಬಂಧಪಟ್ಟ ವಿಭಾಗದ ಪ್ರಾಧ್ಯಾಪಕ;

(iv) ಕುಲಪತಿಯು ಸರ್ಕಾರದೊಡನೆ ಸಮಾಲೋಚನೆ ನಡೆಸಿ ನಾಮನಿರ್ದೇಶಿಸಿದ ರಾಜ್ಯದ ಇತರ ಯಾವುದೇ ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕ;

-ಇವರನ್ನು ಒಳಗೊಂಡಿರತಕ್ಕದ್ದು.

(3) ರಿಜಿಸ್ಟ್ರಾರನು ನೇಮಕಾತಿ ಮಂಡಲಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(4) ಆಯ್ಕೆಯ ಮೂಲಕ ಭರ್ತಿಮಾಡಿಕೊಳ್ಳಲಾಗುವ ಪ್ರಾಧ್ಯಾಪಕ, ಗ್ರಂಥಪಾಲಕ, ರೀಡರ್ ಅಥವಾ ಉಪನ್ಯಾಸಕರ ಪ್ರತಿಯೊಂದು ಹುದ್ದೆಯನ್ನು ಅಗತ್ಯಪಡಿಸಲಾದ ಕನಿಷ್ಠ ಮತ್ತು ಇತರ ವಿದ್ಯಾರ್ಹತೆಯೇನಾದರೂ ಇದ್ದಲ್ಲಿ ಅದನ್ನು, ಉಪಲಬ್ಧಿಗಳು ಮತ್ತು ಭರ್ತಿಮಾಡಬೇಕಾದ ಹುದ್ದೆಗಳ ಸಂಖ್ಯೆ ಇವುಗಳೊಂದಿಗೆ ವಿಧ್ಯುಕ್ತವಾಗಿ ಮತ್ತು ವ್ಯಾಪಕವಾಗಿ ಜಾಹೀರಾತು ಕೊಡತಕ್ಕದ್ದು. ಮತ್ತು ಅರ್ಜಿದಾರರು ಯಾವ ಸಮಾಯಾವಕಾಶದೊಳಗೆ ಅರ್ಜಿಯನ್ನು ಸಲ್ಲಿಸಬಹುದೋ ಅಂಥ ಸೂಕ್ತ ಕಾಲಾವಕಾಶವನ್ನು ಕೊಡತಕ್ಕದ್ದು.

(5) ನೇಮಕಾತಿ ಮಂಡಲಿಯ ಸಭೆಗೆ ನಾಲ್ವರು ಸದಸ್ಯರ ಕೋರಂ ಇರತಕ್ಕದ್ದು. ಅವರ ಪೈಕಿ ಪ್ರಾಧ್ಯಾಪಕರುಗಳ, ರೀಡರುಗಳ ಮತ್ತು ಗ್ರಂಥಪಾಲಕರ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ ಕಡೆಯ ಪಕ್ಷ ಇಬ್ಬರು ತಜ್ಞರಿರತಕ್ಕದ್ದು ಮತ್ತು ಇತರ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ ಕಡೆಯಪಕ್ಷ ಒಬ್ಬರು ತಜ್ಞರಿರತಕ್ಕದ್ದು.

(6) ಮಂಡಲಿಯು ಸಂದರ್ಶನವನ್ನು ನಡೆಸಿ, ಜಾಹೀರಾತು ಮಾಡಿದ ವಿದ್ಯಾರ್ಹತೆಗನುಸಾರವಾಗಿ ಪ್ರತಿಯೊಬ್ಬ ಅಭ್ಯರ್ಥಿಯ ಅರ್ಹತೆಯನ್ನು ನಿರ್ಣಯಿಸತಕ್ಕದ್ದು ಮತ್ತು ಆಯ್ಕೆಯಾದ ವ್ಯಕ್ತಿಗಳ ಪಟ್ಟಿಯನ್ನು ಅರ್ಹತೆಗನುಸಾರವಾಗಿ ಸಿದ್ಧಪಡಿಸತಕ್ಕದ್ದು, ಈ ಪಟ್ಟಿಯನ್ನು ಸಿಂಡಿಕೇಟಿಗೆ ಕಳುಹಿಸತಕ್ಕದ್ದು ಮತ್ತು ಸಿಂಡಿಕೇಟು ಅದಕ್ಕನುಸಾರವಾಗಿ ನೇಮಕಗಳನ್ನು ಮಾಡಿಕೊಳ್ಳತಕ್ಕದ್ದು. ಮಂಡಲಿ ಮತ್ತು ಸಿಂಡಿಕೇಟಿನ ನಡುವೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ ವಿಷಯವನ್ನು ಕುಲಪತಿಗೆ ಉಲ್ಲೇಖಿಸತಕ್ಕದ್ದು ಮತ್ತು ಇವರ ನಿರ್ಣಯವೇ ಅಂತಿಮವಾಗಿರತಕ್ಕದ್ದು.

**ವಿವರಣೆ.-** ಈ ಉಪ-ಪ್ರಕರಣದಲ್ಲಿ ಇರುವುದು ಯಾವುದೂ, ಈ ಅಧಿನಿಯಮದ ಉಪಬಂಧಗಳು ಅಥವಾ ಅಂಥ ನೇಮಕಾತಿಗೆ ಸಂಬಂಧಿಸಿದ ಶಾಸನಗಳಿಗೆ ಇದು ಅನುಗುಣವಾಗಿಲ್ಲವೆಂದು ಕುಲಪತಿಯು ಅಭಿಪ್ರಾಯಪಟ್ಟರುವಲ್ಲಿ ಪಟ್ಟಿಗನುಸಾರವಾಗಿ ನೇಮಕಾತಿಗಳನ್ನು ಮಾಡಿಕೊಳ್ಳಲು ಸಿಂಡಿಕೇಟನ್ನು ಅಗತ್ಯಪಡಿಸುವುದೆಂದು ಅರ್ಥಕಲ್ಪಿಸತಕ್ಕದ್ದಲ್ಲ.

(7) (6)ನೇ ಉಪ-ಪ್ರಕರಣದಡಿ ಪಟ್ಟಿಯನ್ನು ತಯಾರಿಸುವಾಗ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ನಾಗರಿಕರ ಇತರ ಹಿಂದುಳಿದ ವರ್ಗಗಳಿಗಾಗಿ ಹುದ್ದೆಗಳನ್ನು ಮೀಸಲಿಡುವ ವಿಷಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಮಂಡಲಿಯು ಅನುಸರಿಸತಕ್ಕದ್ದು.

(8) (7)ನೇ ಉಪ-ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ನಿಯಮಿಸಲಾದ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿದ್ದು ಸೂಕ್ತ ವ್ಯಕ್ತಿಗಳಾಗಿದ್ದರೆಂದು ಮಂಡಲಿಯು ಅಭಿಪ್ರಾಯಪಟ್ಟರೆ, ಯಾವುದೇ ಆಯ್ಕೆಯಲ್ಲಿ ಅಂಥ ವ್ಯಕ್ತಿಗಳಿಗೆ ಅದ್ಯತೆಯನ್ನು ನೀಡತಕ್ಕದ್ದು.

(9) ಹಿಂದಿನ ಉಪ-ಪ್ರಕರಣಗಳಲ್ಲಿ ಏನೇ ಇದ್ದರೂ, ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಪದವಿಪೂರ್ವ ಕಾಲೇಜುಗಳಲ್ಲಿನ ಪ್ರಾಧ್ಯಾಪಕರು ಮತ್ತು ರೀಡರುಗಳ ಹುದ್ದೆಗಳಿಗೆ ನೇಮಕಾತಿಯನ್ನು ಶಾಸನಗಳಿಂದ ನಿಯಮಿಸಬಹುದಾದಂಥ ಪ್ರಾಧಿಕಾರವು ಅನುಕ್ರಮವಾಗಿ ರೀಡರುಗಳು ಮತ್ತು ಉಪನ್ಯಾಸಕರುಗಳಿಂದ ಜ್ಯೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಬಡ್ತಿಯ ಮೂಲಕ ಮಾಡತಕ್ಕದ್ದು:

ಪರಂತು, ಯಾವುದೇ ಹೊಸ ವಿಷಯವನ್ನು ಪ್ರಾರಂಭಿಸಿದಾಗಲೆಲ್ಲಾ, ಅಂಥ ಹೊಸ ವಿಷಯದಲ್ಲಿ ಪ್ರಾಧ್ಯಾಪಕರುಗಳ, ರೀಡರುಗಳ ಮತ್ತು ಉಪನ್ಯಾಸಕರುಗಳ ನೇಮಕಾತಿಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮಾಡತಕ್ಕದ್ದು.

(10)ಹಿಂದಿನ ಉಪ-ಪ್ರಕರಣಗಳಲ್ಲಿ ಏನೇ ಇದ್ದರೂ, ಪರಸ್ಪರವಾಗಿ ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರ ಹುದ್ದೆಯನ್ನು ಒಪ್ಪಿಕೊಳ್ಳಲು ಅತ್ಯುನ್ನತ ವಿದ್ಯಾವಿಷಯಕ ಪ್ರಶಸ್ತಿಯನ್ನು ಪಡೆದಿರುವ

ಹಾಗೂ ವೃತ್ತಿಪರ ಸಾಧನೆಯನ್ನು ಗಳಿಸಿರುವ ವ್ಯಕ್ತಿಯನ್ನು ಉಪ-ಕುಲಪತಿಯ ಶಿಫಾರಸಿನ ಮೇಲೆ ಆಹ್ವಾನಿಸಲು ಸಿಂಡಿಕೇಟು ಸಕ್ಷಮವಾಗಿರತಕ್ಕದ್ದು:

ಪರಂತು, ಯಾವುದೇ ನಿರ್ದಿಷ್ಟ ಸಮಯದಲ್ಲಿ ಒಂದು ವಿಶ್ವವಿದ್ಯಾಲಯದಲ್ಲಿ ಅಂಥ ಸಂದರ್ಶಕ-ಪ್ರಾಧ್ಯಾಪಕರು ನಾಲ್ವರಿಗಿಂತ ಹೆಚ್ಚಿರತಕ್ಕದ್ದಲ್ಲ.

**50. ಬಡ್ತಿ ಯೋಜನೆಗಳಿಗನುಸಾರವಾಗಿ ನೇಮಕಾತಿ.-** 48ನೇ ಪ್ರಕರಣದಲ್ಲಿ ಏನೇ ಇದ್ದರೂ, ಅದಕ್ಕೆ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ನೇಮಕಾತಿ ಮತ್ತು ಹುದ್ದೆಗಳ ಮೀಸಲಾತಿ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯ ಸಂಸ್ಥೆಗಳು ಮತ್ತು ವಿಭಾಗಗಳಲ್ಲಿನ ರೀಡರುಗಳ ಮತ್ತು ಪ್ರಾಧ್ಯಾಪಕರುಗಳ ಹುದ್ದೆಗಳಿಗೆ ವಿಶ್ವವಿದ್ಯಾಲಯ ಸಂಸ್ಥೆ ಅಥವಾ ವಿಭಾಗವು ಪದವಿಪೂರ್ವ ಮತ್ತು ಸ್ನಾತಕೋತ್ತರ ವ್ಯಾಸಂಗ ಕ್ರಮಗಳನ್ನು ಹೊಂದಿದ್ದರೆ, ಈ ಸಂಬಂಧವಾಗಿ ಶಾಸನಗಳಿಂದ ನಿಯಮಿಸಲಾದ ಬಡ್ತಿ ಯೋಜನೆ ಏನಾದರೂ ಇದ್ದರೆ ಆ ಯೋಜನೆಯ ಅನುಸಾರವಾಗಿ ಸಿಂಡಿಕೇಟು ನೇಮಕವನ್ನು, ಮಾಡತಕ್ಕದ್ದು.

**51. ಇತರ ಬೋಧಕೇತರ ಮತ್ತು ಲಿಪಿಕ ಸಿಬ್ಬಂದಿಯ ನೇಮಕಾತಿ.-** (1) ವಿಶ್ವವಿದ್ಯಾಲಯದಲ್ಲಿ ಬೋಧಕೇತರ ಹುದ್ದೆಗಳಿಗೆ ಮತ್ತು ಲಿಪಿಕ ಹುದ್ದೆಗಳಿಗೆ ನೇಮಕಾತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಒಂದು ನೇಮಕಾತಿ ಮಂಡಲಿಯನ್ನು ರಚಿಸತಕ್ಕದ್ದು.

(2) ಮಂಡಲಿಯು ಇವರನ್ನು ಒಳಕೊಂಡಿರತಕ್ಕದ್ದು,-

(i) ಉಪ-ಕುಲಪತಿ-ಪದನಿಮಿತ್ತ ಅಧ್ಯಕ್ಷ;

(ii) ರಿಜಿಸ್ಟ್ರಾರ್;

(iii) ಯಾವ ಶಾಖೆಗೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆಯೋ ಆ ಶಾಖೆಯ ಕೆಲಸದ ಮೇಲ್ವಿಚಾರಣೆ ನಡೆಸುತ್ತಿರುವ ಉಪ ಕುಲಪತಿಯಿಂದ ನಾಮನಿರ್ದೇಶಿತವಾದ ಒಬ್ಬ ವ್ಯಕ್ತಿ ಮತ್ತು ಅಂಥ ವ್ಯಕ್ತಿ ಇಲ್ಲದಿದ್ದಲ್ಲಿ ಸಂಬಂಧಪಟ್ಟ ಶಾಖೆಯ ಇಲಾಖಾ ಪರಿಷತ್ತಿನ ಅಧ್ಯಕ್ಷ;

(iv) ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಕುಲಪತಿಯಿಂದ ನಾಮನಿರ್ದೇಶಿತರಾದ ಮೂವರು ವ್ಯಕ್ತಿಗಳು, ಅವರಲ್ಲಿ ಒಬ್ಬನು ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದವನಾಗಿರತಕ್ಕದ್ದು ಮತ್ತು ಇನ್ನೊಬ್ಬನು, ಹಿಂದುಳಿದ ವರ್ಗಗಳೆಂದು ಸರ್ಕಾರದಿಂದ ಘೋಷಿತವಾದ ಇತರ ಹಿಂದುಳಿದ ವರ್ಗಗಳಿಗೆ ಅಥವಾ ಯಾವುದೇ ಮತೀಯ ಅಥವಾ ಭಾಷಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವನಾಗಿರತಕ್ಕದ್ದು. ಅಂಥ ಸದಸ್ಯರ ಅವಧಿಯು ಮೂರು ವರ್ಷಗಳಾಗಿರತಕ್ಕದ್ದು.

(3) ಮಂಡಲಿಯ ಸಭೆಯ ಕೋರಂ ನಾಲ್ಕು ಇರತಕ್ಕದ್ದು.

(4) ಶಾಸನಗಳಿಗನುಸಾರವಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಅಂಥ ಹುದ್ಧೆಗಳನ್ನು ಮಂಡಲಿಯು ಆಯ್ಕೆ ಮಾಡಿದ ವ್ಯಕ್ತಿಗಳ ಪೈಕಿ, ಮಂಡಲಿಯು ಸಿದ್ಧಪಡಿಸಿದ ಪಟ್ಟಿಯಲ್ಲಿ ಅವರ ಹೆಸರುಗಳಿರುವ ಕ್ರಮದಲ್ಲಿ ಭರ್ತಿ ಮಾಡಿಕೊಳ್ಳತಕ್ಕದ್ದು. ಮಂಡಲಿಯೊಂದಿಗೆ

ಸಮಾಲೋಚಿಸಿದ ತರುವಾಯ, ಹುದ್ಧೆಗಳ ಯಾವುದೇ ಪ್ರವರ್ಗದ ಸಂಬಂಧದಲ್ಲಿ ಶಾಸನಗಳಲ್ಲಿ ನಿಯಮಿಸಬಹುದಾದಂತೆ ಬಡ್ತಿ, ಪ್ರತಿನಿಯೋಜನೆ ಅಥವಾ ವರ್ಗಾವಣೆ ಅಥವಾ ಕರಾರಿನ ಮೂಲಕ ಹುದ್ಧೆಗಳಿಗೆ ನೇಮಕಾತಿಯನ್ನು ಮಾಡತಕ್ಕದ್ದು.

(5) ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ರಿಕ್ತ ಸ್ಥಾನಗಳಿಗೆ ನೇಮಕಾತಿಗಾಗಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವಾಗ, ಮಂಡಲಿಯು, ಸರ್ಕಾರವು ಕಾಲಕಾಲಕ್ಕೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಹುದ್ಧೆಗಳನ್ನು ಮೀಸಲಿರುಸುವುದಕ್ಕಾಗಿ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.

(6) ಎಲ್ಲ ನೇಮಕಾತಿಗಳನ್ನು ಸಿಂಡಿಕೇಟ್ ಮಾಡತಕ್ಕದ್ದು. ಮಂಡಲಿ ಮತ್ತು ಸಿಂಡಿಕೇಟ್‌ಗಳ ನಡುವೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ, ವಿಷಯವನ್ನು ಕುಲಪತಿಯವರಿಗೆ ಉಲ್ಲೇಖಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ವೇತನ ಶ್ರೇಣಿಯ ಗರಿಷ್ಠ ಮಿತಿಯು ಎರಡು ಸಾವಿರದ ಇಪ್ಪತ್ತನಾಲ್ಕು ರೂಪಾಯಿಗಳನ್ನು ಮೀರದ ಅಂಥ ಹುದ್ದೆಗಳಿಗೆ ನೇಮಕಾತಿಯನ್ನು ಉಪ-ಕುಲಪತಿಯು ಮಾಡತಕ್ಕದ್ದು.

(7) ಹಿಂದಿನ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ರಾಜ್ಯ ಸಿವಿಲ್ ಸೇವೆಗಳ 'ಸಿ' ಮತ್ತು 'ಡಿ' ಗುಂಪುಗಳ ಹುದ್ದೆಗಳಿಗೆ ಸಮನಾದ ವಿಶ್ವವಿದ್ಯಾಲಯದಲ್ಲಿನ ಹುದ್ದೆಗಳಿಗೆ ಈ ಉದ್ದೇಶಕ್ಕಾಗಿ ರಚಿಸಬೇಕಾದ ಶಾಸನಗಳಿಗೆದದ ಅನುಸಾರವಾಗಿ ಮತ್ತು ಸರ್ಕಾರವು ಕಾಲಕಾಲಕ್ಕೆ ಅನುಸೂಚಿತ ಜಾತಿಗಳು, ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ಹುದ್ದೆಗಳನ್ನು ಮೀಸಲಿರಿಸಿರುವ ಬಗ್ಗೆ ಹೊರಡಿಸಿದ ಆದೇಶಕ್ಕನುಸಾರವಾಗಿ ಉಪ-ಕುಲಪತಿಯು ನೇಮಕಾತಿಯನ್ನು ಮಾಡತಕ್ಕದ್ದು.

**52. ಅನುಸೂಚಿತ ಜಾತಿ ಮೊದಲಾದವರಿಗೆ ಬಡ್ತಿಗಾಗಿ ಖಾಲಿ ಸ್ಥಾನಗಳ ಮೀಸಲಾತಿ.**- ವಿಶ್ವವಿದ್ಯಾಲಯದಲ್ಲಿ ಯಾವುದೇ ಹುದ್ಧೆಗೆ ಬಡ್ತಿಯ ಮೂಲಕ ನೇಮಕಾತಿ ಮಾಡುವಲ್ಲಿ, ಅಂಥ ನೇಮಕಾತಿಯನ್ನು ಮಾಡಲು ಅಧಿಕಾರವನ್ನು ಹೊಂದಿರುವ ಪ್ರಾಧಿಕಾರವು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಮತ್ತು ನಾಗರಿಕರಲ್ಲಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಇತರ ವರ್ಗಗಳಿಗೆ ಬಡ್ತಿಯ ಖಾಲಿ ಸ್ಥಾನಗಳಲ್ಲಿ ಹುದ್ಧೆಗಳ ಮೀಸಲಾತಿಗಾಗಿ ಕಾಲಕಾಲಕ್ಕೆ ಸರ್ಕಾರವು ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.

**53. ಸೇವಾ ಷರತ್ತುಗಳು.**- ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ನೇಮಕಾತಿ, ಆಯ್ಕೆಯ ಕಾರ್ಯವಿಧಾನ, ವೇತನ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಶಾಸನಗಳ ಮೂಲಕ ನಿಯಮಿಸಬಹುದದಾಂಥದ್ದಾಗಿರತಕ್ಕದ್ದು.

**54. ನಿವೃತ್ತಿವೇತನ, ಉಪದಾನ ಇತ್ಯಾದಿ.**- (1) ವಿಶ್ವವಿದ್ಯಾಲಯವು, ಅದರ "ದ್ಯೋಗಿಗಳ ಪ್ರಯೋಜನಕ್ಕಾಗಿ ಶಾಸನಗಳ ಮೂಲಕ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ತಾನು ಉಚಿತವೆಂದು ಭಾವಿಸಬಹುದಾದ ಅಂಥ ನಿವೃತ್ತಿ ವೇತನ, "ಪದಾನ ಮತ್ತು ಭವಿಷ್ಯನಿಧಿಗಳನ್ನು ರಚಿಸತಕ್ಕದ್ದು.

(2) ವಿಶ್ವವಿದ್ಯಾಲಯವು (1)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ಭವಿಷ್ಯನಿಧಿಗಳನ್ನು ಸ್ಥಾಪಿಸಿದ್ದಲ್ಲಿ, ಸರ್ಕಾರವು, ಭವಿಷ್ಯನಿಧಿಗಳ ಅಧಿನಿಯಮ, 1925ರ (1925ರ ಕೇಂದ್ರ ಅಧಿನಿಯಮ

ಋಋಋ) ಉಪಬಂಧಗಳು, ಅದು ಸರ್ಕಾರಿ ಭವಿಷ್ಯನಿಧಿ ಎಂಬಂತೆ ಅಂಥ ನಿಧಿಗೆ ಅನ್ವಯಿಸತಕ್ಕದ್ದೆಂದು ಘೋಷಿಸಬಹುದು.

(3) ಸರ್ಕಾರಿ ಸೇವೆಯಲ್ಲಿರುವ ವ್ಯಕ್ತಿಗಳನ್ನು ಈ ಅಧಿನಿಯಮದ ಅಡಿಯಲ್ಲಿ, ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿದರೆ, ಅವರು ಕರ್ನಾಟಕ ಸಿವಿಲ್ ಸೇವಾ ನಿಯಮಗಳು ಅಥವಾ ವಿಶ್ವವಿದ್ಯಾಲಯಕ್ಕೆ, ಅವರ ವರ್ಗಾವಣೆಯಾಗುವುದಕ್ಕೆ ಮೊದಲು ಅವರಿಗೆ ಅನ್ವಯವಾಗುತ್ತಿದ್ದಂಥ ಇತರ ನಿಯಮಗಳಡಿ ನಿವೃತ್ತಿ ವೇತನ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

(4) ವಿಶ್ವವಿದ್ಯಾಲಯವು, ಹಣಕಾಸು ಸಮಿತಿಯೊಂದಿಗೆ ಸಮಾಲೋಚಿಸಿ ತಾನು ಉಚಿತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಭವಿಷ್ಯನಿಧಿಯನ್ನು ತೊಡಗಿಸಬಹುದು.

## ಅಧ್ಯಾಯ IX

## ಸಾಮಾನ್ಯ

**55. ಪದವನ್ನು ತೆರವು ಮಾಡುವುದು.-** (1) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಯಾವನೇ ಸದಸ್ಯನು, ರಿಜಿಸ್ಟ್ರಾರ್ ಅವರಿಗೆ ಪತ್ರ ಬರೆಯುವ ಮೂಲಕ ತನ್ನ ಹುದ್ದೆಗೆ ರಾಜೀನಾಮೆ ಕೊಡಬಹುದು ಮತ್ತು ರಿಜಿಸ್ಟ್ರಾರನು ಅಂಥ ಪತ್ರವನ್ನು ಸ್ವೀಕರಿಸಿದ ಮೇಲೆ ರಾಜೀನಾಮೆ ಜಾರಿಗೆ ಬರತಕ್ಕದ್ದು.

(2) ಒಂದು ನಿರ್ದಿಷ್ಟ ಪ್ರಾಧಿಕಾರದ ಅಥವಾ ನಿಕಾಯದ ಸದಸ್ಯನಾಗಿ ಅಥವಾ ನಿರ್ದಿಷ್ಟ ಹುದ್ದೆಯನ್ನು ಹೊಂದಿರುವ ಸಾಮರ್ಥ್ಯದಿಂದಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರುವ ವ್ಯಕ್ತಿಯು ನಿರ್ದಿಷ್ಟ ಪ್ರಾಧಿಕಾರದ ಅಥವಾ ನಿಕಾಯದ ಅಥವಾ ಸಂದರ್ಭಾನುಸಾರ ನಿರ್ದಿಷ್ಟ ಹುದ್ಧೆಯಲ್ಲಿ ಒಬ್ಬ ಸದಸ್ಯನೆಂಬುದಾಗಿ ಮುಂದುವರೆಯುವವರೆಗೆ ಮಾತ್ರ ಆ ಪದವನ್ನು ಧಾರಣ ಮಾಡತಕ್ಕದ್ದು.

(3) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನು ನೈತಿಕ ಪತನವನ್ನು ಒಳಗೊಂಡ ಯಾವುದೇ ಅಪರಾಧಕ್ಕಾಗಿ ನ್ಯಾಯಾಲಯದಿಂದ ನಿರ್ಣೀತ ಅಪರಾಧಿಯಾದರೆ, ಅವನು ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

**56. ಆಕಸ್ಮಿಕ ರಿಕ್ತತೆಗಳನ್ನು ಭರ್ತಿ ಮಾಡುವುದು.-** ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ಇತರ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಸದಸ್ಯರ ಪೈಕಿ ಉಂಟಾಗುವ ಎಲ್ಲ ಆಕಸ್ಮಿಕ ರಿಕ್ತ ಸ್ಥಾನಗಳನ್ನು, ಯಾವ ಸದಸ್ಯನ ಸ್ಥಾನ ರಿಕ್ತವಾಗಿದೆಯೋ ಆ ಸದಸ್ಯನನ್ನು ನಾಮನಿರ್ದೇಶನ ಮಾಡಿದ ವ್ಯಕ್ತಿ ಅಥವಾ ನಿಕಾಯವು ಅದಷ್ಟು ಬೇಗನೇ ಭರ್ತಿ ಮಾಡತಕ್ಕದ್ದು ಮತ್ತು ಆಕಸ್ಮಿಕ ರಿಕ್ತ ಸ್ಥಾನದಲ್ಲಿ ನೇಮಕಗೊಂಡ ವ್ಯಕ್ತಿಯು ಯಾವ ವ್ಯಕ್ತಿಯ ಸ್ಥಾನದಲ್ಲಿ ಭರ್ತಿಗೊಂಡಿರುವನೋ ಆ ವ್ಯಕ್ತಿಯು ಸದಸ್ಯನಾಗಿರುತ್ತಿದ್ದ ಉಳಿದ ಅವಧಿಯವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರತಕ್ಕದ್ದು:

ಪರಂತು, ಯಾವುದೇ ರಿಕ್ತ ಸ್ಥಾನವನ್ನು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ಇತರ ನಿಕಾಯದ ಸದಸ್ಯರ ಅವಧಿಯು ಮುಕ್ತಾಯಗೊಳ್ಳುವ ದಿನಾಂಕಕ್ಕೆ ಆರು ತಿಂಗಳ ಮೊದಲು ಅಂಥ ರಿಕ್ತತೆಯು ಕಂಡುಬಂದಿದ್ದರೆ, ಭರ್ತಿ ಮಾಡತಕ್ಕದ್ದಲ್ಲ.

**57. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮದ, ಶಾಸನಗಳ ಅಥವಾ ಅಧ್ಯಾದೇಶಗಳ ಅಥವಾ ಅದರ ಅಡಿಯಲ್ಲಿ ಮಾಡಿದ ನಿಯಮಗಳ ಯಾವುವೇ ಉಪಬಂಧಗಳ

ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ವಿಶ್ವವಿದ್ಯಾಲಯದ ಯಾವೊಬ್ಬ ಉದ್ಯೋಗಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**58. ರಿಕ್ತಸ್ಥಾನಗಳಿಂದಾಗಿ ವಿಶ್ವವಿದ್ಯಾಲಯ ಪ್ರಾಧಿಕಾರಗಳ ವ್ಯವಹರಣೆಗಳು ಅಸಿಂಧುವಾಗಿರತಕ್ಕದ್ದಲ್ಲ.-** ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ಇತರ ನಿಕಾಯದಲ್ಲಿ ಉಂಟಾಗಿರುವ ಯಾವುದೇ ರಿಕ್ತತೆ ಅಥವಾ ಯಾವನೇ ಸದಸ್ಯನ ಚುನಾವಣೆ ಅಥವಾ ನೇಮಕಾತಿಯಲ್ಲಿನ ಯಾವುದೇ ದೋಷ ಅಥವಾ ಅಕ್ರಮದ ಕಾರಣದಿಂದಾಗಿ ಮಾತ್ರ ಅಥವಾ ಅಂಥ ಕಾರ್ಯದಲ್ಲಿನ ಅಥವಾ ವ್ಯವಹರಣೆಗಳಲ್ಲಿನ ಯಾವುದೇ ದೋಷ ಅಥವಾ ಅಕ್ರಮವು ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಿದ್ದಲ್ಲಿ ಅಸಿಂಧುವಾಗತಕ್ಕದ್ದಲ್ಲ.

**59. ವಿಶ್ವವಿದ್ಯಾಲಯದ ಮತ್ತು ನಿಕಾಯಗಳ ರಚನೆಯಲ್ಲಿ ವಿವಾದಗಳು.-** ಯಾವೊಬ್ಬ ವ್ಯಕ್ತಿಯು ವಿಶ್ವವಿದ್ಯಾಲಯದ ಯಾವುದೇ ನಿಕಾಯದ ಸದಸ್ಯನಾಗಿ ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಯೇ ಅಥವಾ ನಾಮನಿರ್ದೇಶಿತನಾಗಿದ್ದಾನೆಯೇ ಅಥವಾ ಸದಸ್ಯನಾಗಲು ಹಕ್ಕುಳ್ಳವನಾಗಿದ್ದಾನೆಯೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಪ್ರಶ್ನೆಯನ್ನು ಕುಲಪತಿಗೆ ಉಲ್ಲೇಖಿಸತಕ್ಕದ್ದು ಮತ್ತು ಅದರ ಮೇಲಿನ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**60. ಪ್ರಥಮ ಉಪ-ಕುಲಪತಿಯ ತಾತ್ಕಾಲಿಕ ಅಧಿಕಾರಗಳು.-** (1) ಸಿಂಡಿಕೇಟ್ ಮತ್ತು ವಿಶ್ವವಿದ್ಯಾಲಯದ ಅಂಥ ಇತರ ಪ್ರಾಧಿಕಾರಗಳನ್ನು, ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದಿಂದ ಆರು ತಿಂಗಳೊಳಗೆ ಅಥವಾ ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದೇಶಿಸಬಹುದಾದ ಒಂದು ವರ್ಷಕ್ಕೆ ಮೀರದ ಅಂಥ ಹೆಚ್ಚಿನ ಅವಧಿಯೊಳಗಾಗಿ ರಚಿಸಲು ವ್ಯವಸ್ಥೆ ಮಾಡುವುದು ಪ್ರಥಮ ಉಪಕುಲಪತಿಯ ಕರ್ತವ್ಯವಾಗಿರತಕ್ಕದ್ದು.

(2) ಪ್ರಥಮ ಉಪ-ಕುಲಪತಿಯು, ಕುಲಪತಿಯೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಗೆ ಅವಶ್ಯವಾಗಬಹುದಾದ ಅಂಥ ನಿಯಮಗಳನ್ನು ರಚಿಸತಕ್ಕದ್ದು.

(3) ತತ್‌ಕ್ಷಣ ಅವಶ್ಯಕವಾಗಬಹುದಾದ ಅಂಥ ಶಾಸನಗಳನ್ನು ಪ್ರಾರೂಪಿಸುವುದು ಮತ್ತು ಅನುಮೋದನೆಗಾಗಿ ಅವುಗಳನ್ನು ಸೂಕ್ತ ಪ್ರಾಧಿಕಾರಕ್ಕೆ ಸಲ್ಲಿಸುವುದು ಪ್ರಥಮ ಉಪಕುಲಪತಿಯ ಕರ್ತವ್ಯವಾಗಿರತಕ್ಕದ್ದು.

(4) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಅಧಿನಿಯಮದ ಮೇರೆಗೆ ಒಂದು ಪ್ರಾಧಿಕಾರವನ್ನು ಯಥೋಚಿತವಾಗಿ ರಚಿಸುವ ಅಂಥ ಕಾಲದವರೆಗೆ ಪ್ರಥಮ ಉಪ-ಕುಲಪತಿಯು ಈ ಅಧಿನಿಯಮದ ಅಡಿಯಲ್ಲಿ ಅಂಥ ಪ್ರಾಧಿಕಾರದ ಯಾವುವೇ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸಲು ಮತ್ತು ನಿರ್ವಹಿಸಲು ತಾತ್ಕಾಲಿಕವಾಗಿ ಯಾವೊಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದು ಅಥವಾ ಯಾವುದೇ ಸಮಿತಿಯನ್ನು ರಚಿಸಬಹುದು.

**61. ಉಪ-ಕುಲಪತಿ ಮತ್ತು ಇತರ ಅಧಿಕಾರಿಗಳು ಮುಂತಾದವರು, ಲೋಕ ನೌಕರರಾಗಿರತಕ್ಕದ್ದು.-** ವಿಶ್ವವಿದ್ಯಾಲಯದ ಉಪ-ಕುಲಪತಿ, ರಿಜಿಸ್ಟ್ರಾರ್, ಹಣಕಾಸು ಅಧಿಕಾರಿ ಮತ್ತು ಇತರ ಉದ್ಯೋಗಿಗಳು, ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಅನುಸರಿಸಿ

ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ ಭಾರತ ದಂಡ ಸಂಹಿತೆಯ (1860 ರ ಕೇಂದ್ರ ಅಧಿನಿಯಮ XLV)
21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರು ಎಂಬುದಾಗಿ ಭಾವಿಸತಕ್ಕದ್ದು.

**62. ಶಾಸನಗಳು, ಅಧ್ಯಾದೇಶಗಳು, ಇತ್ಯಾದಿಗಳ ಮುಂದುವರಿಕೆ.**- ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ಶಾಸನಗಳು, ಅಧ್ಯಾದೇಶಗಳು ಮತ್ತು ನಿಯಮಗಳನ್ನು ರಚಿಸುವವರೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 1976ರ ಅಡಿಯಲ್ಲಿ ರಚಿಸಿದ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಶಾಸನಗಳು, ಅಧ್ಯಾದೇಶಗಳು, ಮತ್ತು ನಿಯಮಗಳು ಸರ್ಕಾರದ ಮೂಲಕ ಪಡೆದ ಕುಲಪತಿಯ ಅನುಮೋದನೆಯೊಂದಿಗೆ ಉಪಕುಲಪತಿಯು, ಈ ಅಧಿನಿಯಮದ ಉಪಬಂಧಗಳೊಂದಿಗೆ ಅವುಗಳು ಅಸಂಗತವಾಗದಿರುವಷ್ಟರ ಮಟ್ಟಿಗೆ ಅದರಲ್ಲಿ ಮಾಡಬಹುದಾದ ಅಳವಡಿಕೆಗಳು ಅಥವಾ ಮಾರ್ಪಾಟುಗಳಿಗೆ ಒಳಪಟ್ಟು ಅವು ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ರಚಿಸಲಾದ ಶಾಸನಗಳು, ಅಧ್ಯಾದೇಶಗಳು ಮತ್ತು ನಿಯಮಗಳೆಂದು ಭಾವಿಸತಕ್ಕದ್ದು.

**63. ಕೆಲವು ಪರೀಕ್ಷೆಯ ಬಗ್ಗೆ ಉಳಿಸುವಿಕೆ.**- (1) ಈ ಅಧಿನಿಯಮ, ಶಾಸನಗಳು, ಅಧ್ಯಾದೇಶಗಳು ಅಥವಾ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ,-

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಅಧಿನಿಯಮ, 1964, ಕರ್ನಾಟಕ ವಿಶ್ವವಿದ್ಯಾನಿಲಯ ಅಧಿನಿಯಮ 1949, ಮೈಸೂರು ವಿಶ್ವವಿದ್ಯಾಲಯ ಅಧಿನಿಯಮ, 1956 ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ, 1976ರ ಅಡಿಯಲ್ಲಿ ಸ್ಥಾಪನೆಯಾದ ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಅಥವಾ ಮೈಸೂರು ವಿಶ್ವವಿದ್ಯಾಲಯ ಅಥವಾ ಕುವೆಂಪು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯದ ಆರೋಗ್ಯ ವಿಜ್ಞಾನದಲ್ಲಿ ಪದವಿಗಾಗಿ ಅಧ್ಯಯನ ಮಾಡುತ್ತಿದ್ದ ಯಾವೊಬ್ಬ ವಿದ್ಯಾರ್ಥಿಗೆ ಅಂಥ ಪರೀಕ್ಷೆಗಳ ಬಗ್ಗೆ ವಿಶ್ವವಿದ್ಯಾಲಯವು ಏರ್ಪಾಟು ಮಾಡುವವರೆಗೆ ಆ ಅಧಿನಿಯಮಗಳ ಅಡಿಯಲ್ಲಿ ಜಾರಿಯಲ್ಲಿರುವ ವಿನಿಯಮಗಳಿಗನುಸಾರವಾಗಿ ಬೆಂಗಳೂರು, ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯಗಳು ಮತ್ತು ಕುವೆಂಪು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಮತ್ತು ಮಂಗಳೂರು ವಿಶ್ವವಿದ್ಯಾಲಯಗಳ ಪರೀಕ್ಷೆಗಳಿಗೆ ಪ್ರವೇಶ ನೀಡಬಹುದು ಮತ್ತು ಅಂಥ ಪರೀಕ್ಷೆಯ ಫಲಿತಾಂಶದ ಮೇಲೆ ಯಾವ ಅಂತರ ವಿಶ್ವವಿದ್ಯಾಲಯಗಳ ಆರೋಗ್ಯ ವಿಜ್ಞಾನದ ಪದವಿಗೆ ಅವನು ಅರ್ಹನಾಗಿರುವನೋ ಆ ಪದವಿಯನ್ನು ಆತನಿಗೆ ಪ್ರದಾನ ಮಾಡಬಹುದು.

(ಬಿ) ಬೆಂಗಳೂರು ವಿಶ್ವವಿದ್ಯಾಲಯ ಅಧಿನಿಯಮ, 1964, ಕರ್ನಾಟಕ ವಿಶ್ವವಿದ್ಯಾಲಯ ಅಧಿನಿಯಮ, 1949, ಮೈಸೂರು ವಿಶ್ವವಿದ್ಯಾಲಯ ಅಧಿನಿಯಮ 1956 ಮತ್ತು ಕರ್ನಾಟಕ ರಾಜ್ಯ ವಿಶ್ವದ್ಯಾಲಯಗಳ ಅಧಿನಿಯಮ, 1976 ಅಡಿಯಲ್ಲಿ ಸ್ಥಾಪನೆಗೊಂಡ ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಅಥವಾ ಮೈಸೂರು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ ಅಥವಾ ಮಂಗಳೂರು ವಿಶ್ವವಿದ್ಯಾಲಯ ಅಥವಾ ಕುವೆಂಪು ವಿಶ್ವವಿದ್ಯಾಲಯವು ಯಾವುದೇ

ಪರೀಕ್ಷೆಯನ್ನು ನಡೆಸಿದ್ದು, ಅದರ ಫಲಿತಾಂಶವು ಪ್ರಕಟಿತವಾಗಿದ್ದು, ಆದರೆ ಅವುಗಳಿಗೆ ಸಂಬಂಧಪಟ್ಟ ಪದವಿಗಳನ್ನು ಪ್ರದಾನ ಮಾಡಿರದಿದ್ದರೆ ಅಥವಾ ನೀಡಿಲ್ಲದಿದ್ದರೆ ಅಥವಾ ಅಂಥ ಪರೀಕ್ಷೆಯ ಫಲಿತಾಂಶವನ್ನು, ಸದರಿ ವಿಶ್ವವಿದ್ಯಾಲಯವು ಪ್ರಕಟಿಸಿಲ್ಲದಿದ್ದರೆ, ಅಗ ಅಂಥ ಪರೀಕ್ಷೆಯನ್ನು ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಅಥವಾ ಮೈಸೂರು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ ಮತ್ತು ಮಂಗಳೂರು ವಿಶ್ವವಿದ್ಯಾಲಯದಿಂದ ನಡೆಸಲಾಗಿದೆ ಎಂದು ಭಾವಿಸತಕ್ಕದ್ದು.

**64. ಅಧಿನಿಯಮವು ಇತರ ಅಧಿನಿಯಮಿತಿಗಳ ಮೇಲೆ ಪ್ರಭಾವವುಳ್ಳದ್ದಾಗಿದೆ.-** ಈ ಅಧಿನಿಯಮ ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಶಾಸನ ಅಥವಾ ಅಧ್ಯಾದೇಶವು, ವಿಶ್ವವಿದ್ಯಾಲಯ ಪ್ರದೇಶದಲ್ಲಿರುವ ಯಾವುದೇ ಕಾಲೇಜಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಏಳನೇ ಅನುಸೂಚಿಯ ಮೂರನೇ ಪಟ್ಟಿಯಲ್ಲಿ ನಿರೂಪಿಸಲಾದ ವಿಷಯಗಳ ಸಂಬಂಧದಲ್ಲಿ ಇತರ ಯಾವುದೇ ಅಧಿನಿಯಮಿತಿಯಲ್ಲಿ ಅದಕ್ಕೆ ಅಸಂಗತವಾಗಿ ಏನೇ ಒಳಗೊಂಡಿದ್ದರೂ, ಅವು ಪರಿಣಾಮಕಾರಿಯಾಗಿರತಕ್ಕದ್ದು.

**65. ತೊಂದರೆಗಳ ನಿವಾರಣೆ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ತನಗೆ ಅವಶ್ಯಕವೆಂದು ಕಂಡುಬರುವ ಯಾವುದೇ ಕ್ರಮ ತೆಗೆದುಕೊಳ್ಳಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಆದೇಶವನ್ನು, ಸದರಿ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವುದೇ ತೊಂದರೆಯೂ ಇಲ್ಲ ಅಥವಾ ನಿವಾರಿಸುವ ಅಗತ್ಯವಿಲ್ಲವೆಂಬ ಕಾರಣದ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(3) ಈ ಪ್ರಕರಣದ ಅಡಿಯಲ್ಲಿ ಪ್ರಕಟಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಪ್ರಕಟಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

* * * *

**ಅಧಿಸೂಚನೆ**

**ಬೆಂಗಳೂರು, ದಿನಾಂಕ 18ನೇ ಮಾರ್ಚ್ 1996.** [**ಆಕುಕ 28 ಎಂಎಸ್‌ಎಫ್ 92**]

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ 1994 (1994ರ ಕರ್ನಾಟಕ ಅಧಿನಿಯಮ 44)ರ ಪ್ರಕರಣ 1ರ ಉಪ ಪ್ರಕರಣ(3)ರಲ್ಲಿನ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 1ನೇ ಜೂನ್ 1996ನೇ ದಿನಾಂಕದಿಂದ ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರಬೇಕೆಂದು ಈ ಮೂಲಕ ಗೊತ್ತು ಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಪದ್ಮಾವತಿ,
ಸರ್ಕಾರದ ಉಪ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

* * * *

**2014ರ ಕರ್ನಾಟಕ ಅಧಿನಿಯಮ ಸಂಖ್ಯೆ: 01**

(2014ರ ಜನವರಿ ತಿಂಗಳ ಒಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2013**

(2013ರ ಡಿಸೆಂಬರ್ ತಿಂಗಳ ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1994ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1994ನ್ನು (1994ರ ಕರ್ನಾಟಕ ಅಧಿನಿಯಮ 44) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

12, 15, 16, 17, 18, 21, 24, 40, 43, 44, ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.